# ಮೆನ್ಸ್ ಟ್ರೌಶರ್ಸ್

ಈ ಹಂತ ಹಂತದ ಟುಟೋರಿಯಲ್ ನಿಮಗಾಗಿ.





## ಬೇಕಾಗಿರುವ ವಸ್ತುಗಳು

೬೦ ಇಂಚು ಅಗಲದ ೧.೫ ಮೇಟರ್ ಬಟ್ಟೆ
೨ ಮೀಟರ್ ರೆಡಿಸ್ಟ್ರಿಪ್ ಫ್ಯುಸಿಂಗ್
೨ ಮೀಟರ್ ಅಂತಿ ಸ್ಲಿಪ್ ವೇಸ್ಟ್ ಬ್ಯಾಂಡ್ ಲೈನಿಂಗ್
೧/೪ ಮೇಟರ್ ಮೈಕ್ರೋ ಡಾಟ್ ಫ್ಯುಸಿಂಗ್
೧ ಮೀಟರ್ ಪಾಕೆಟಿಂಗ್ ಮಟೀರಿಯಲ್
೧/೪ ಮೀಟರ್ ಕಾನ್ವಾಸ್ ಫ್ಯುಸಿಂಗ್
www.ushasew.com ನಿಂದ ಡಔನ್ಲೋಡ್ ಮಾಡಿಕೊಂಡಿರುವ ಮೆನ್ಸ್ ಟ್ರೌಶರ್ ಟೆಂಪ್ಲೇಟ್
ಚಾಲ್ಕ್
ಸ್ಕೇಲ್
ಮ್ಯಾಚಿಂಗ್ ದಾರ
ಬೀಡೆಡ್ ಪಿನ್ಸ್
ಮೇಶರಿಂಗ್ ಟೇಪ್
ಲೂಪ್ ಟರ್ನರ್
೭” ಜಿಪ್ಪರ್
ಟ್ರೌಶರ್ ಹುಕ್ ಮತ್ತು ಐ ಸೆಟ್
ಹ್ಯಾಂಡ್ ನೀಡಲ್
ಮತ್ತು ಊಷಾ ಜನೋಮ್ ಜಿಪ್ಪರ್ ಫುಟ್



ಈ ಟುಟೋರಿಯಲಿನಲ್ಲಿ ಬಟ್ಟೆಯನ್ನು ಟೆಂಪ್ಲೇಟಿನಂತೆ ಕತ್ತರಿಸುವುದು ಎಂದು ಕಲೆಯುತ್ತೀರಿ. ಪ್ಯಾಂಟಿನ ಮುಂಭಾಗದ ಪೀಸ್ ಪಾಕೆಟಿನೊಂದಿಗೆ ತಯಾರಿಸುವುದು, ಫ್ಲೈ ಯನ್ನು ಮಾಡುವುದು ಮತ್ತು ಮುಂಭಾಗವನ್ನು ಜಿಪ್ಪರಿನೊಂದಿಗೆ ಒಟ್ಟಿಗೆ ಸೇರಿಸುವುದು, ಹಿಂಭಾಗದ ಪೀಸನ್ನು ಪಾಕೆಟಿನೊಂದಿಗೆ ತಯಾರಿಸುವುದು, ಹಿಂಭಾಗದ ಪೀಸ್ ಗಳನ್ನು ಒಟ್ಟಿಗೆ ಸೇರಿಸುವುದು, ಅದರೊಂದಿಗೆ ಮುಂಭಾಗ ಮತ್ತು ಹಿಂಭಾಗದ ಪೀಸನ್ನು ಒಟ್ಟಿಗೆ ಸೇರಿಸುವುದು. ವೇಸ್ಟ್ ಬ್ಯಾಂಡನ್ನು ತಯಾರಿಸಿ ಅದನ್ನು ಟ್ರೌಶರಿಗೆ ಸೇರಿಸುವುದು ಬಾಟಮ್ ಹೆಮ್ಮಿನೊಂದಿಗೆ ಮುಗಿಸುವುದು.

## ಹಂತ ೧ : ಟೆಂಪ್ಲೇಟನ್ನು ಮಾರ್ಕ್ ಮಾಡಿ ಕಟ್ ಮಾಡುವುದು




ನಾವು ನೆವಿ ಬ್ಲು ಬಣ್ಣದ ಬಟ್ಟೆಯನ್ನು ಟ್ರೌಶರಿಗೆ ತೆಗೆದುಕೊಂಡಿದ್ದೇವೆ. ಬಟ್ಟೆಯನ್ನು ತೆರೆಯಿರಿ ಮತ್ತು ಉದ್ದವಾಗಿ ಮಡಚಿ ತಪ್ಪಾದ ಭಾಗೆ ತಪ್ಪಾದ ಭಾಗದ ಮೇಲೆ ಬರಬೇಕು. ಈಗ ಟೆಂಪ್ಲೇಟನ್ನು ಇಡುವುದ ರೊಂದಿಗೆ ಪ್ರಾರಂಭಿಸೋಣ. ಮುಂಭಾಗದ ಟೆಂಪ್ಲೇಟನ್ನು ಬಟ್ಟೆಯ ಕೆಳಗಿನಿಂದ ಅರ್ಧಭಾಗದಲ್ಲಿಡಿ ಮತ್ತು ಹಿಂಭಾಗದ ಟೆಂಪ್ಲೇಟನ್ನು ತೋರಿಸಿರುವಂತೆ ಮೇಲ್ಭಾಗದ ಅರ್ಧದ ಮೇಲೆ. ಟೆಮ್ಲೇಟ್ ಗಳನ್ನು ಬಟ್ಟೆಗೆ ಪಿನ್ ಮಾಡೋಣ. ಮುಂಭಾಗದ ಟೆಂಪ್ಲೇಟಿನಿಂದ ಪ್ರಾರಂಭಿಸೋಣ.ಪಿನ್ ಬಟ್ಟೆಯ ಎರಡೂ ಪದರಕ್ಕೂ ಹೋಗಿದೆಯೇ ನೋಡಿಕೊಳ್ಳಿ









ಹಿಂಭಾಗದ ಟೆಂಪ್ಲೇಟನ್ನೂ ಪಿನ್ ಮಾಡಿ.ಈಗ ಚಾಲ್ಕಿನ ಸಹಾಯದಿಂದ ಟೆಂಪ್ಲೇಟನ್ನು ಬಟ್ಟೆಯ ಮೇಲೆ ಮಾರ್ಕ್ ಮಾಡೋಣ.ಕಾರ್ನರ್ ಮತ್ತು ಕರ್ವ್ ಎಡ್ಜಿನಲ್ಲಿ ಹುಷಾರಾಗಿರಿ.ಪರಿಪೂರ್ಣವಾದ ಒಂದು ಜೊತೆ ಟ್ರೌಶರ್ ಪಡೆಯಲು ಪರ್ಫೆಕ್ಟಾದ ಟ್ರೇಸ್ ಲೈನ್ ಮುಖ್ಯವಾದದ್ದು. ಮುಗಿಸಿದ ಮೇಲೆ, ಟೆಂಪ್ಲೇಟನ್ನು ಅನ್ ಪಿನ್ ಮಾಡಿ.ಟೆಂಪ್ಲೇಟ್ ಗಳನ್ನ ಪಕ್ಕಕಿಡಿ.ಮಾರ್ಕ್ ಮಾಡಿರುವ ಗೆರೆಯ ಮೇಲೆ ಕತ್ತರಿಯಿಂದ ಕತ್ತರಿಸಿ.ಮುಂಭಾಗದ ಪೀಸಿನಿಂದ ಪ್ರಾರಂಭಿಸಿ. ಈ ಹಂತದಲ್ಲಿ ಅಚ್ಚುಕಟ್ಟಾದ ಕಟ್ ಬರಲು ಸ್ಥಿರವಾದ ಕೈ ತುಂಬಾ ಮುಖ್ಯವಾದದ್ದು.ಮುಂದುವರಿದು ಹಿಂಭಾಗ್ದ ಪೀಸನ್ನೂ ಕಟ್ ಮಾಡಿ ಮತ್ತು ಪೀಸ್ ಗಳನ್ನು ಪಕ್ಕಕಿಡಿ.





ಮಿಕ್ಕಿರುವ ಬಟ್ಟೆಯನ್ನು ತೆಗೆದುಕೊಂಡು ಮತ್ತು ಬೇರೆ ಟೆಂಪ್ಲೇಟಿನ ಕೆಲಸ ಮಾಡೋಣ. ಫ್ಲೈಯನ್ನು , ಸಣ್ಣ ಮುಂಭಾಗದ ಪಾಕೆಟ್, ದೊಡ್ಡದಾದ ಮುಂಭಾಗದ ಪಾಕೆಟ್ ಮತ್ತು ಹಿಂಭಾಗದ ಪಾಕೆಟ್ ಟೆಂಪ್ಲೇಟ್ ಗಳನ್ನು ಬಟ್ಟೆಯ ಏಲೆ ತೋರಿಸಿರುವಂತೆ ಇಡಬೇಕು. ಎಲ್ಲಾ ಟೆಂಪ್ಲೇಟನ್ನು ಬಟ್ಟೆಗೆ ಪಿನ್ ಮಾಡಿ. ಸಣ್ಣ ಟೆಂಪ್ಲೇಟನ್ನು ಬಟ್ಟೆಗೆ ಪಿನ್  ಮಾಡುವುದು ಪರಿಪೂರ್ಣವಾದ ಮಾರ್ಕಿಂಗ್ ಮತ್ತು ಕಟಿಂಗಿಗೆ ಉಪಯುಕ್ತವಾಗುತ್ತದೆ. ಟೇಂಪ್ಲೇಟನ್ನು ಬಟ್ಟೆಯ ಏಲೆ ಚಾಲ್ಕಿನಿಂದ ಟ್ರೇಸ್ ಮಾಡಿ. ಫ್ಲೈ ಯಿಂದ ಪ್ರಾರಂಭಿಸಿ ಹಿಂಭಾಗದ ಪಾಕೆಟಿನೊಂದಿಗೆ ಮುಗಿಸಿ. ನಮಗೆ ಇನ್ನೊಂದು ಪೀಸ್ ಹಿಂಭಾಗದ ಪಾಕೆಟ್ ಬೇಕಾಗುತ್ತದೆ. ಟೆಂಪ್ಲೇಟನ್ನು ಮಾರ್ಕ್ ಮಾಡಿರುವ ಲೈನ್ ಮೇಲೆ ಇಟ್ಟು ಪಿನ್ ಮಾಡಿ.  ಟೆಂಪ್ಲೇಟನ್ನು ಬಟ್ಟೆಯ ಮೇಲೆ ಟ್ರೇಸ್ ಮಾಡಿ. ಎಲ್ಲಾ ಟೆಂಪ್ಲೇಟನ್ನು ಅನ್ ಪಿನ್ ಮಾಡಿ ಅದನ್ನು ಪಕ್ಕಕಿಡಿ. ಪೀಸ್ ಗಳನ್ನು ಒಂದೊಂದಾಗಿ ಕಟ್ ಮಾಡಿ. ಸಾರಾಂಶ : ನಮ್ಮ ಹತ್ತಿರ ಎರಡು ಹಿಂಭಾಗದ ಪಾಕೆಟ್ ಪೀಸ್, ೨ ಬೇರೆ ಬೇರೆ ಮುಂಭಾಗದ ಪೀಸ್ ಮತ್ತು ಒಂದು ಫ್ಲೈ ಪೀಸಿದೆ.











ಈಗ ಲನ್ನಿಂಗ್ ಬಟ್ಟೆಯ ಕಡೆ ಹೋಗೋಣ. ಉದ್ದವಾಗಿ ತೋರಿಸಿರುವಂತೆ ಮಡಚಿ. ದೊಡ್ಡದಾದ ಮುಂಭಾಗದ ಪಾಕೆಟಿನ ಟೆಂಪ್ಲೇಟ್, ದೊಡ್ಡದಾದ ಹಿಂಭಾಗದ ಪಾಕೆಟಿನ ಟೆಂಪ್ಲೇಟ್ ಮತ್ತು ಫ್ಲೈ ಟೇಂಪ್ಲೇಟನ್ನು ತೊರಿಸಿರುವಂತೆ ಇಡಿ.ಮೊದಲಿನಂತೆ ನಾವು ಎಲ್ಲಾ ಟೆಂಪ್ಲೇಟನ್ನು ಬಟ್ಟೆಗೆ ಪಿನ್ ಮಾಡಬೇಕು.ಮುಂದುವರೆಯುತ್ತಾ ಅದನ್ನು ಬಟ್ಟೆಯ ಮೇಲೆ ಚಾಲ್ಕಿನಿಂದ ಟ್ರೇಸ್ ಮಾಡಿ, ಟೆಂಪ್ಲೇಟನ್ನು ಅನ್ ಪಿನ್ ಮಾಡಿ ಅದನ್ನು ಪಕ್ಕಕಿಟ್ಟು ಮತ್ತು ಕೊನೆಯಲ್ಲಿ ಟ್ರೇಸ್ ಮಾಡಿರುವ ಲೈನ್ ಮೇಲೆ ಕಟ್ ಮಾಡಿ. ೨ ಪೀಸ್ ಮುಂಭಾಗದ ಪಾಕೆಟ್, ಹಿಂಭಾಗದ ಪಾಕೆಟ್ ಮತ್ತು ಫ್ಲೈ ಪೀಸ್ ಇರಬೇಕು. ಕಟ್ ಮಾಡಿರುವ ಪೀಸನ್ನು ಪಕ್ಕಕಿಡಿ. ನಾವೀಗ ಫ್ಲೈ ಪೀಸನ್ನು ಮೈಕ್ರೋ ಡಾಟ್ ಫ್ಯೂಸಿಂಗ್ನಿಂದ ಕಟ್ ಮಾಡಬೇಕು. ಮತ್ತು ಸಣ್ಣದಾದ ಹಿಂಭಾಗದ ಪಾಕೆಟ್ ಪೀಸನ್ನು ಕಾನ್ವಾಸ್ ಫ್ಯೂಸಿಂಗಿನಿಂದ. ಮೈಕ್ರೋ ಡಾಟ್ ಫ್ಯುಸಿಂಗನ್ನು ಬಲಭಾಗ ಬಲಭಾಗವನ್ನು ನೋಡುವಂತೆ ಇಡಬೇಕು. ಟೆಂಪ್ಲೇಟನ್ನು ಚಾಲ್ಕಿನಿಂದ ಮಾರ್ಕ್ ಮಾಡಿ ಮಾರ್ಕ್ ಮಾಡಿರುವ ಲೈನ್ ಮೇಲೆ ಕಟ್ ಮಾಡಿ. ಪೀಸ್ ಗಳನ್ನು ಪಕ್ಕಕಿಡಿ.







ಈಗ ಕಾನ್ವಾಸ್ ಫ್ಯುಸಿಂಗನ್ನು ತೆಗೆದುಕೊಂಡು ಮತ್ತೆ ಅದರ ಮೇಲೆ ಪಾಕೆಟ್ ಟೆಂಪ್ಲೇಟನ್ನು ಇಡಬೇಕು. ಮಾರ್ಕ್ ಮಾಡಿರುವ ಲೈನ್ ಮೇಲೆ ಕಟ್ ಮಾಡಿ. ನೀವು ನೋಡಬಹುದು, ನಮ್ಮ ಹತ್ತಿರ ಎರಡು ಕಾನ್ವಾಸ್ ಫ್ಯುಸಿಂಗ್ ಇದೆ. ಫ್ಯುಸಿಂಗನ್ನು ಅರ್ಧಕ್ಕೆ ಮಡಚಿ ಮತ್ತು ಕ್ರೀಸ್ ಮೇಲೆ ತೋರಿಸಿರುವಂತೆ ಕಟ್ ಮಾಡಿ. ಇದೇ ವಿಧಾನವನ್ನು ಇನ್ನೊಂದು ಪೀಸಿಗೂ ಮಾಡಬೇಕು. ನಮ್ಮ ಹತ್ತಿರ ೨ ಫ್ಲೈ ಪೀಸ್ ಗಳು ಇವೆ ಮತ್ತು ೪ ಪೀಸ್ ಕಾನ್ವಾಸ್ ಫ್ಯುಸಿಂಗನ್ನು ಹಿಂಭಾಗದ ಟೆಂಪ್ಲೇಟಿನಿಂದ ಮಾಡಿದ್ದೇವೆ.







## ಹಂತ ೨ : ಸೈಡ್ ಸೀಮನ್ನು ಓವರ್ ಡೂ ಮಾಡುವುದು, ಇನ್ನರ್ ಸೀಮನ್ನು ಮಾಡುವುದು ಮತ್ತು ಮುಂಭಾಗದ ಕ್ರಾಚ್ ಏರಿಯವನ್ನು ಮಾಡುವುದು

ನಾವೀಗ ಟ್ರೌಶರಿನ ಮುಂಭಾಗವನ್ನು ಹೊಲೆಯೋಣ. ನೀವು ನೋಡಬಹುದು ನಿಮ್ಮ ಹತ್ತಿರ ಮುಂಭಾಗದ ಎರಡು ಪೀಸ್ಗಳು ಇವೆ. ಒಂದು ಬಲಭಾಗ ಮತ್ತು ಇನ್ನೊಂದು ಎಡಭಾಗ.ನಾವು ಸೈಡ್ ಸೀಮ್, ಇನ್ನರ್ ಸೀಮ್ ಮತ್ತು ಕ್ರಾಚ್ ಏರಿಯವನ್ನು ಬೇರೆ ಬೇರೆಯಾಗಿ ಈವರ್ ಎಡ್ಜ್ ಮಾಡಬೇಕು.ಬಟ್ಟೆಗಳನ್ನು ನಿಮ್ಮ ಊಷಾ ಜನೋಮ್ ವಂಡರ್ ಸ್ಟಿಚ್ ಪ್ಲಸ್ ಮಷೀನಿಗೆ ತೆಗೆದುಕೊಂಡು ಹೋಗಿ.ಟ್ರೌಶರಿನ ಒಂದು ಪೀಸನ್ನು ತೆಗೆದುಕೊಂಡು ಔಟರ್ ಸೀಮನ್ನು ಪ್ರೆಸ್ಸರ್ ಫುಟಿನ ಕೆಳಗೆ ಅಲೈನ್ ಮಾಡಿ. ಮಷೀನನ್ನು ಜಿಗ್ ಜಾಗಿಗೆ ಅದು ಸಿ ಪ್ಯಾಟರ್ನ್ ಸೆಲೆಕ್ಟರ್ ಡಯಲಿಗೆ ಮತ್ತು ಹೊಲಿಗೆಯ ಉದ್ದ ೧.೫
ಟ್ರೌಶರಿನ ಮೇಲ್ಭಾಗದಿಂದ ಪ್ರಾರಂಭಿಸಿ ಕೊನೆಯನ್ನು ತಲಪುವವರೆಗೂ ಹೊಲೆಯುತ್ತಾ ಹೋಗಿ. ಜಿಗ್ ಜಾಗ್ ಹೊಲಿಗೆ ಟ್ರೌಶರಿಗೆ ಅಚ್ಚುಕಟ್ಟಾದ ಫಿನಿಷಿಂಗನ್ನು ಕೊಡುತ್ತದೆ ಮತ್ತು ಫ್ರೆಯಿಂಗನ್ನು ತೆಡೆಯುತ್ತದೆ. ದಾರವನ್ನು ಕತ್ತರಿಸಿ ಇನ್ನರ್ ಸೀಮಿನ ಕಡೆಗೆ ಮುಂದುವರೆಯಿರಿ.ಬಾಟಮಿನಿಂದ ಪ್ರಾರಂಭಿಸಿ ಕ್ರಾಚ್ ಏರಿಯಾವರೆಗೂ ಮುಂದುವರೆಯಿರಿ. ಕ್ರಾಚನ್ನು ತಲುಪಿದಾಗ ನಿಲ್ಲಿಸಿ. ಸೂಜಿಯನ್ನು ಎತ್ತಿ ಬಟ್ಟೆಯನ್ನು ತಿರುಗಿಸಿ ಮತ್ತು ಟ್ರೌಶರಿನ ಮೇಲ್ಭಾಗ ತಲಪುವವರೆಗೂ ಹೊಲೆಯಿರಿ.ದಾರವನ್ನು ಕತ್ತರಿಸಿ ಮತ್ತು ಇದೇ ವಿಧಾನವನ್ನು ಇನ್ನೊಂದು ಮುಂಭಾಗದ ಪೀಸಿಗೂ ಮಾಡಬೇಕು. ಇದನ್ನು ಮುಗಿಸಿದ ಮೇಲೆ ಹೆಚ್ಚುವರಿಯಾದ ದಾರವನ್ನು ಕತ್ತರಿಸಿ ಸರಿಯಾದ ಫಿನಿಷಿಂಗಾಗಿ. ಎಡ್ಜ್ಸ್ ನೋಡಲಿ ಹೀಗೆ ಕಾಣಬೇಕು.










## ಹಂತ ೩ : ಪಾಕೆಟ್ ಗಳನ್ನು ತಯಾರಿಸುವುದು

ಇವು ನಾವು ಮುಂಭಾಗದ ಪಾಕೆಟಿಗಗಿ ಕಟ್ ಮಾಡಿರುವ ಪೀಸಸ್ಗಳು. ಮುಂಭಾಗದ ಎಡಭಾಗದ ಪಾಕೆಟಿನ ಕೆಲಸ ಮಾಡೋಣ. ಮುಂಭಾಗದ ಪಾಕೆಟಿನ ಲೈನಿಂಗ್ ಬಟ್ಟೆಯನ್ನು ತೆಗೆದುಕೊಳ್ಳಿ ಇನ್ನೊಂದು ಹಿಂಭಾಗದ ಪಾಕೆಟ್ ಪೀಸಿನೊಂದಿಗೆ ತೆಗೆದುಕೊಳ್ಳಿ ನಾವು ಇದನ್ನು ಒಟ್ಟಿಗೆ ಹೊಲೆಯಬೇಕು. ನಾವು ಓವರ್ ಎಡ್ಜ್ ಹೊಲಿಗೆ ಅಥವಾ ಜಿಗ್ ಜಾಗ್ ಹೊಲಿಗೆಯನ್ನು ಇಲ್ಲಿ ಹೇಳಿರುವ ಎಡ್ಜ್ಸ್ ಮೇಲೆ ಹೊಲೆಯಬೇಕು.

ಇದನ್ನು ಸರಿಯಾಗಿ ಹೊಲೆಯಲು ಸೇರಿಸಬೇಕು. ದೊಡ್ಡದಾದ ಪೀಸನ್ನು ಪಾಕೆಟಿನ ಬಲಭಾಗದ ಮೇಲೆ ಇಡಬೇಕು. ತಪ್ಪಾದ ಭಾಗ ಮೇಲ್ಭಾಗವನ್ನು ನೋಡುವಂತೆ. ಮತ್ತು ಉದ್ದದ ಪೀಸನ್ನು ಪಾಕೆಟಿನ ಎಡಭಾಗದ ಮೇಲೆ ತೋರಿಸಿರುವಂತೆ ಇಡಬೇಕು.

ಪೀದಸ್ ಗಳನ್ನು ಪಾಕೆಟ್ ಲೈನಿಂಗಿಗೆ ಹೊಲೆಯೋಣ. ಮೊದಲು, ದೊಡ್ಡದಾದ ಪೀಸಿನಿಂದ ಪ್ರಾರಂಭಿಸೋಣ. ನಾವು ಇನ್ನರ್ ಸೀಮನ್ನು ಹೊಲೆಯುತ್ತೇವೆ. ಬಟ್ಟೆಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಇಲ್ಲಿ ತೋರಿಸಿರುವಂತೆ ಅಲೈನ್ ಮಾಡಿ. ಪ್ಯಾಟರ್ನ್ ಸೆಲೆಕ್ಟರ್ ಡಯಲನ್ನು ಏ ಗೆ ಇಟ್ಟು ಹೊಲಿಗೆಯ ಉದ್ದವನ್ನು ೨.೫ ಗೆ ಇಟ್ಟು ಹೊಲೆಯಲು ಪ್ರಾರಂಭಿಸಿ. ಸ್ಥಿರವಾದ ಕೈಯಿರಲಿ ಇದು ಬಟ್ಟೆಯ ಕರ್ವ್ಡ್ ಪೀಸ್. ಒಮ್ಮೆ ಕೊನೆಯನ್ನು ತಲುಪಿದಾಗ ದಾರವನ್ನು ಕತ್ತರಿಸಿ ಇನ್ನೊಂದು ಪೀಸಿನ ಕಡೆಗೆ ಮುಂದುವರಿಸಿ. ಸೇರಿಸುವುದು ಸುಲಭ. ಬಟ್ಟೆಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಅಲೈನ್ ಮಾಡಿ ಹೊಲೆಯರಿ. ಇದಾದ ಮೇಲ ದಾರವನ್ನು ಕತ್ತರಿಸಿ.

ನಿಮ್ಮ ಹೊಲಿಗೆಗಳು ಎರಡೂ ಪೀಸಿನಲ್ಲಿ ನೋಡಲು ಹೀಗೆ ಕಾಣಬೇಕು. ನಾವು ಬಲಭಾಗದ ಪಾಕೆಟನ್ನು ಇದೇ ರೀತಿ ಮ್ತಯಾರಿಸಬೇಕು,

# ಹಂತ ೪ : ಪಾಕೆಟನ್ನು ಮುಂಭಾಗದ ಪೀಸಿಗೆ ಸೇರಿಸುವುದು






ನಾವು ಎಡಭಾಗದ ಪಾಕೆಟನ್ನು ಟ್ರೌಶರಿನ ಎಡಭಾಗದ ತಪ್ಪಾದ ಭಾಗದ ಮೇಲೆ ಬಲಭಾಗವನ್ನು ನೋಡುವಂತೆ ಇಟ್ಟಿದ್ದೇವೆ. ಬಟ್ಟೆಗಳನ್ನು ಪ್ರೆಸ್ಸರ್ ಫುಟ್ಟಿನ ಕೆಳಗೆ ಇಟ್ಟು ಪಾಕೆಟಿನ ಎದುರಿಗೆ ಹೊಲೆಯಿಸಿ. ನಿಮ್ಮ ಪಾಕೆಟ್ ಗಳು ಹೋಡಲು ಹೀಗೆ ಕಾಣಬೇಕು. ಟ್ರೌಶರಿನ ಹೆಚ್ಚಾದ ಭಾಗವನ್ನು ತೆಗೆಯಬೇಕು. ಇದನ್ನು ಕತ್ತರಿಯಿಂದ ಕತ್ತರಿಸಿ.




ಪಾಕೆಟನ್ನು ಸಣ್ಣ ಪಾಕೆಟಿನೊಂದಿಗೆ ತಿರುಗಿಸಿ ಮತ್ತು ನಿಮ್ಮ ಬೆರಳಿನಲ್ಲಿ ತಿರುಗಿಸಿ. ಈಗ ಪಾಕೆಟನ್ನು ಇನ್ನೊಂದು ಕಡೆಗೆ ತಿರುಗಿಸಿ. ಮತ್ತು ನಾವು ಕ್ರೀಸ್ ಮಾಡಿರುವ ಕ್ರೀಸಿನ ಮೇಲೆ ಎಡ್ಜ್ ಸ್ಟಿಚನ್ನು ಹಾಕಬೇಕು.ಫೋಲ್ಡನ್ನು ಪ್ರೆಸ್ಸರ್ ಫುಟಿನ ಕೆಳಗೆ ಇಟ್ಟು ಹೊಲೆಯಲು ಪ್ರಾರಂಭಿಸಿ.




ಹೊಲೆಯುವಾಗ ಫೋಲ್ಡ್ ಜಾಗದಲ್ಲಿರುವಂತೆ ನೋಡಿಕೊಳ್ಳಿ.ಇದದ ಮೇಲೆ ದಾರವನ್ನು ಕತ್ತರಿಸಿ. ನಾವು ಫೋಲಿನ ಮೇಲೆ ಹೊಲೆದಿದ್ದೇವೆ. ನಾವ್ ಈಗ ಸ್ಟ್ರಿಪಿನ ಓಪೆನ್ ಎಡ್ಜನ್ನು ಟ್ರೌಶರಿಗೆ ಹೊಲೆಯಬೇಕು. ಬಟ್ಟೆಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಇಟ್ಟು ಹೊಲೆಯಲು ಪ್ರಾರಂಭಿಸಿ. ಹೊಲಿಗೆಗಳು ಹೀಗೇ ಕಾಣುತ್ತದೆ. ನಾವು ಪಾಕೆಟಿನ ಬಾಟಮ್ ಎಡ್ಜನ್ನು ಹೊಲೆಯಬೇಕು.ತೋರಿಸಿರುವಂತೆ ಪಾಕೆಟನ್ನು ಅರ್ಧಕ್ಕೆ ಮಡಚಿ ಮತ್ತು ಬಾಟಮ್ ಸುತ್ತಲೂ ಹೊಲೆಯೋಣ. ಪಾಕೆಟನ್ನು ಪ್ರೆಸ್ಸರ್ ಫುಟಿನ ಕೆಳಗೆ ಇಟ್ಟು ಹೊಲೆಯಲು ಪ್ರಾರಂಭಿಸಿ.






ಸ್ಥಿರವಾದ ಕೈಯಿಂದ ನಿಧಾನವಾಗಿ ಹೊಲೆಯಿರಿ ಏಕೆಂದರೆ ಇದು ಕರ್ವ್ಡ್ ಸರ್ಫೇಸ್.ಇದನ್ನು ಮುಗಿಸಿದ ಮೇಲೆ ದಾರವನ್ನು ಕತ್ತರಿಸಿ.ಇದೇ ರೀತಿ ಹೊಲಿಗೆಗಳು ಕಾಣಬೇಕು.ಈಗ ನಾವು ಪಾಕೆಟನ್ನು ಒಳಗಿನಿಂದ ಹೊರಕ್ಕೆ ತಿರುಗಿಸಬೇಕು. ಎಡ್ಜಸ್ ಗಳೂ ಸರಿಯಾಗಿ ಎಳೆದಿದೆಯೇ ನೋಡಿಕೊಳ್ಳಿ ಇಲ್ಲಿ ತೋರಿಸಿರುವಂತೆ ನಾವು ಹೊಲಿಗೆಯ ಗೆರೆಯ ಮೇಲೆ ಮತ್ತೆ ಹೊಲೆಯುತ್ತೇವೆ. ಅದನ್ನು ಪ್ರೆಸ್ಸರ್ ಫುಟಿನ ಕೆಳಗೆ ಇಟ್ಟು ಹೊಲೆಯಲು ಪ್ರಾರಂಭಸಿ.ಹೊಲಿಗಗಳೂ ಹೀಗೇ ಕಾಣಬೇಕು. ನಾವು ಈಗ ಟ್ರೌಶರಿನ ವೇಸ್ಟ್ ಲೈನಿನ ಕೆಲಸ ಮಾಡೋಣ. ಪಾಕೆಟನ್ನು ಸರಿಯಾಗಿ ಮೇಲ್ಭಾಗಕ್ಕೆ ಅಲೈನ್ ಮಾಡಿ ಮತ್ತು ಬಟ್ಟೆಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಇಡಿ.




ಹೊಲೆಯಲು ಶುರು ಮಾಡಿ. ಒಮ್ಮೆ ಕೊನೆಯನ್ನು ತಲುಪಿದಾಗ ನಿಲ್ಲಿಸಿ ದಾರವನ್ನು ಕತ್ತರಿಸಿ. ಮುಂಭಾಗದ ಪಾಕೆಟನ್ನು ಟ್ರೌಶರಿನ ಒಂದು ಕಡೆಗೆ ಹೊಲೆದು ಮುಗಿಸದ್ದೇವೆ. ನಾವು ಇದನ್ನೇ ಪಾಕೆಟನ್ನು ಸೈಡಿಗೆ ಹೊಲೆಯಲು ಬಳಸುತ್ತೇವೆ.






ನಮ್ಮ ಪಾಕೆಟ್ ಮತ್ತು ಅಂತಿಮ ಹೊಲಿಗೆ ನೋಡಲು ಹೀಗೆ ಕಾಣುತ್ತದೆ. ಇದೇ ವಿಧಾನವನ್ನು ಇನ್ನೊಂದು ಕಡೆಗೂ ಪುನರಾವರ್ತಿಸಿ

## ಹಂತ ೫ : ಫ್ಲೈ ಪೀಸ್ಸನ್ನು ತಯಾರಿಸುವುದು

















ಈಗ ಫ್ಲೈ ಕೆಲಸ ಮಾಡೋಣ. ನೀವು ನೋಡಬಹುದು ನಮ್ಮ ಹತ್ತಿರ ಪ್ರತಿ ಬಟ್ಟೆಯ ಎರಡು ಫ್ಲೈ ಪೀಸ್ ಗಳು ಇದೆ. ಮೇನ್ ಬಟ್ಟೆ, ಲೈನಿಂಗ್ ಬಟ್ಟೆ ಮತ್ತು ಮೈಕ್ರೋ ಡಾಟ್ ಫ್ಯೂಸಿಂಗ್ ಬಟ್ಟೆ. ಮೇನ್ ಬಟ್ಟೆಯ ಒಂದು ಪೀಸ್ ತೆಗೆದು ಕೊಳ್ಳೀ ಮತ್ತು ತಪ್ಪಾದ ಭಾಗವನ್ನು ಮೇಲೆ ಬರುವಂತೆ ಇಡಿ. ಈಗ ಮೈಕ್ರೋ ಡಾಟ್ ಫ್ಯೂಸಿಂಗನ್ನು ತೆಗೆದು ಕೊಂಡು ಗ್ಲೂ ಇರುವ ಭಾಗವನ್ನು ಮೇನ್ ಬಟ್ಟೆಯ ಮೇಲೆ ತೋರಿಸಿರುವಂತೆ ಇಡಿ. ನಾವು ಇದೇ ವಿಧಾನವನ್ನು ಇನ್ನೊಂದು ಫ್ಲೈ ಪೀಸಿಗೂ ಮಾಡಬೇಕು. ಈ ಎರಡೂ ಪೀಸನ್ನು ಐರನ್ ಮಾಡೋಣ ಇದು ಬಟ್ಟೆಗಳೂ ಒಟ್ಟಿಗೆ ಫ್ಯುಸಾಗುತದೆ.

ಇದನ್ನು ಎರಡೂ ಪೀಸಿಗೆ ಮಾಡಬೇಕು. ಲೈನಿಂಗ್ ಬಟ್ಟೆಯನ್ನು ಮೇನ್ ಬಟ್ಟೆ ಮೇಲೆ ಬಲಭಾಗ ಬಲಭಾಗ ನೋಡುವಂತೆ ಇಡಬೇಕು. ಇದನ್ನು ಎರಡೂ ಪೀಸಿಗೂ ಮಾಡಿ. ನಾವೀಗ ಫ್ಲೈ ಪೀಸನ್ನು ಬೇರೆ ಬೇರೆಯಾಗಿ ಹೊಲೆಯಬೇಕು.

ಫ್ಲೈ ಪೀಸನ್ನು ಪ್ರೆಸ್ಸರ್ ಫುಟಿನ ಕೆಳಗೆ ಇಟ್ಟು ಮಷೀನನ್ನು ನೇರ ಹೊಲಿಗೆಗೆ ಮತ್ತು ಹೊಲಿಗೆಯ ಉದ್ದ ೨.೫ ಗೆ ಇಟ್ಟು ಹೊಲೆಯಲು ಪ್ರಾರಂಭಿಸಿ. ಕರ್ವ್ನಲ್ಲಿ ಹುಷಾರಾಗಿರಿ ಮತ್ತು ಸ್ಥಿರವಾದ ಕೈ ಯಿರಲಿ. ಒಮ್ಮೆ ಹೊಲೆದದ್ದು ಮುಗಿಸಿದ ಮೇಲೆ, ದಾರವನ್ನು ಕತ್ತರಿಸಿ. ಈಗ ಕತ್ತರಿಯಿಂದ ಕರ್ವ್ನಲ್ಲಿ ವೀಡಿಯೋದಲ್ಲಿ ತೋರಿಸಿರುವಂತೆ ನಾಚಸ್ ಮಾಡಿ. ನಾಚಸ್ ಫ್ಲೈಯನ್ನು ಟ್ರೌಶರಿನ ಮೇಲೆ ಅಚ್ಚುಕಟ್ಟಾಗಿ ಕೂರುತ್ತದೆ. ಫ್ಲೈಯನ್ನು ಒಳಗಿನಿಂದ ಹೊರಕ್ಕೆ ನಿಧಾನವಾಗಿ ತಿರುಗಿಸಿ, ಮೇನ್ ಬಟ್ಟೆ ನಿಮ್ಮನ್ನು ನೋಡುವಂತಿರಬೇಕು. ನಾವೀಗ ಫೋಲ್ಡಿನ ಮೇಲೆ ಎಡ್ಜ್ ಸ್ಟಿಚನ್ನು ಹಾಕೋಣ. ಬಟ್ಟೆಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಇಟ್ಟು ಹೊಲೆಯಲು ಪ್ರಾರಂಭಿಸಿ. ನೀವು ಕೊನೆಯನ್ನು ತಲುಪಿದಾಗ, ನಿಲ್ಲಿಸಿ ಮತ್ತು ದಾರವನ್ನು ಕತ್ತರಿಸಿ. ನಿಮ್ಮ ಹೊಲಿಗೆಗಳು ನೋಡಲು ಹೀಗೆ ಕಾಣಾಬೇಕು.

ಈಗ ಮುಗಿಸದೆ ಇರುವ ಕಡೆನೂ ನಾವು ಹೊಲೆಯಬೇಕು. ಬಟ್ಟೆಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಇಟ್ಟು ಮಷೀನನ್ನು ಜಿಗ್ ಜಾಗ್ ಹೊಲಿಗೆಗೆ ಮತ್ತು ಹೊಲಿಗೆಯ ಉದ್ದವನ್ನು ೧.೫ ಗೆ ಇಡಬೇಕು. ಮುಗಸದೆ ಇರುವ ಕಡೆ ಹೊಲೆಯಿರಿ. ಫಿನಿಷ್ಸ್ ಆಗಿರುವ ಫ್ಲೈ ಹೀಗೆ ಕಾಣುತ್ತದೆ. ನಾವು ಇದೇ ವಿಧಾನವನ್ನು ಇನ್ನೊಂದು ಫ್ಲೈ ಪೀಸಿಗೂ ಮಾಡಬೇಕು. ಈಗ ನಮ್ಮ ಹತ್ತಿರ ಎರಡು ಪೀಸ್ ಗಳು ತಯಾರಾಗಿದೆ.

## ಹಂತ ೬ : ಮುಂಭಾಗದ ಪೀಸನ್ನು ಫ್ಲೈಯನ್ನು ಸೇರಿಸುವದರೊಂದಿಗೆ ಸೇರಿಸುವುದು, ಜಿಪ್ಪರನ್ನು ಸೇರಿಸಿ ಮತ್ತು ಕ್ರಾಚನ್ನು ಮುಗಿಸುವುದು




ನಾವೀಗ ಫ್ಲೈ ಪೀಸನ್ನು ಮತ್ತು ಜಿಪ್ಪರನ್ನು ಮುಂಭಾಗದ ಬಟ್ಟೆಗೆ ಹೊಲೆಯುತ್ತೇವೆ. ಇದನ್ನು ಸೀವಿಂಗ್ ಮಷೀನಿಗೆ ತೆಗೆದುಕೊಂಡು ಹೋಗಿ. ನಾವು ಮೊದಲು ಬಲಭಾಗದ ಮುಂಭಾಗದ ಬಟ್ಟೆಯ ಕೆಲಸ ಮಾಡೋಣ. ತೇಪಿನ ಸಹಾಯದಿಂದ ೬.೫ ಇಂಚು ಮೇಲಿನಿಂದ ಅಳತೆ ಮಾಡಿ ಚಾಲ್ಕಿನಿಂದ ಮಾರ್ಕ್ ಮಾಡಿ.




ಜಿಪ್ಪರನ್ನು ತೆಗೆದುಕೊಂಡು ಜಿಪ್ಪರಿನ ಕೊನೆಯನ್ನು ೬.೫ ಇಂಚು ಮಾರ್ಕ್ ಮಾಡಿರುವ ಕಡೆ ಬಲಭಾಗ ಮೇಲೆಬರುವಂತೆ. ಜಿಪ್ಪರಿನ ಓಪೆನಿಂಗ್ ಭಾಗ ಮೇಲ್ಭಾಗದಲ್ಲಿರುತ್ತದೆ. ಈಗ ಒಂದು ಪೀಸ್ ಫ್ಲೈಯನ್ನು ಜಿಪ್ಪರಿನ ಬಲಭಾಗದಮೇಲೆ ಕೆಳಕ್ಕೆ ನೋಡುವಂತೆ ಇಡಬೇಕು.




ರೆಗ್ಯುಲರ್ ಫುಟನ್ನು ಊಷಾ ಜನೋಮ್ ಜಿಪ್ಪರ್ ಫೂಟಿಗೆ ಬದಲಾಯಿಸಿ. ಅಲೈನ್ ಮಾಡಿರುವ ಪೀಸನ್ನು ಪ್ರೆಸ್ಸರ್ ಫುಟಿನ ಕೆಳಗೆ ಇಟ್ಟು ಮಷೀನನ್ನು ನೇರ ಹೊಲಿಗೆಗೆ ಮತ್ತು ಹೊಲಿಗೆಯ ಉದ್ದವನ್ನು ೨.೫ ಗೆ ಇಟ್ಟು ಬಾಟಮಿನಿಂದ ಪ್ರಾರಂಭಿಸಿ ಟ್ರೌಶರಿನ ಮೇಲ್ಭಾಗದವರೆಗೂ ಇಲ್ಲಿ ತೋರಿಸಿರುವಂತೆ ಹೊಲೆಯಿರಿ. ಪ್ರಾರಂಭದಲ್ಲಿ ಮತ್ತು ಕೊನೆಯಲ್ಲಿ ರಿವರ್ಸ್ ಹೊಲಿಗೆಯನ್ನು ಹಾಕಲು ಮರೆಯಬೇಡಿ.




ಈಗ ಟ್ರೌಶರನ್ನು ಬಲಗಡೆಗೆ ತಿರುಗಿಸಿ ಮತ್ತು ಬಟ್ಟೆಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಅಲೈನ್ ಮಾಡಿ. ಜಿಪ್ಪರನ್ನು ಅರ್ಧಕ್ಕೆ ತೆರೆಯಿರಿ. ನಾವೀಗ ಎಡ್ಜ್ ಸ್ಟಿಚನ್ನು ಹಾಕುತ್ತೇವೆ. ಒಮ್ಮೆ ಅರ್ಧದ ಮಾರ್ಕನ್ನು ತಲುಪಿದಾಗ ಜಿಪ್ಪರನ್ನು ಕ್ಲೋಸ್ ಮಾಡಿ ಮತ್ತು  ಜಿಪಿನ ತುದಿಯನ್ನು ತಲಪುವವರೆಗೂ ಹೊಲೆಯುವುದನ್ನು ಮುಂದುವರೆಸಿ. ಇದನ್ನು ರಿವರ್ಸ್ ಹೊಲಿಗೆಯೋಂದಿಗೆ ಮುಗಿಸಿ. ಟ್ರೌಶರಿನ ಬಲಭಾಗದಲ್ಲಿ ಜಿಪ್ಪರನ್ನು ಸೇರಿಸಿದ ಮೇಲೆ ನೋಡಲು ಹೀಗೆ ಕಾಣಬೇಕು.




ನಾವೀಗ ಟ್ರೌಶರಿನ ಎಡಭಾಗದ ಕಡೆ ಹೋಗೋಣ. ನಾವೀಗ ಮೆತ್ತೆ ೬.೫ ಇಂಚು ಮಾರ್ಕ್ನು ಈ ಕಡೆನೂ ಮಾಡಬೇಕು. ಟೇಪಿನ ಸಹಾಯದಿಂದ ಅಳತೆ ಮಾಡಿ ಮಾರ್ಕ್ ಮಾಡಿ. ಫ್ಲೈ ಯಿನ ಪಾಯಿಂಟೆಡ್ ಪಾಯಿಂಟೆಡ್ ಎಡ್ಜನ್ನು ತೋರಿಸಿರುವಂತೆ ಇಟ್ಟು ಮಾರ್ಕ್ ಮಾಡಿ. ಬಲಭಾಗ ಬಲಭಾಗವನ್ನು ನೋಡುವಂತೆ.




ಜಿಪ್ಪರ್ ಫುಟನ್ನು ರೆಗ್ಯುಲರ್ ಫುಟಿಗೆ ಬದಲಾಯಿಸಿ. ಟ್ರೌಶರ್ ಮತ್ತು ಬಟ್ಟೆಯನ್ನು ಪ್ರೆಸ್ಸರ್ ಫೂಟಿನ ಕೆಳಗೆ ಇಟ್ಟು ಮತ್ತು ಅದನ್ನು ನೇರ ಹೊಲಿಗೆಯನ್ನು ಫ್ಲೈಯಿನ ಬಾಟಮಿನಿಂದ ಮೇಲಕ್ಕೆ ಹೊಲೆಯಿರಿ. ರಿವರ್ಸ್ ಹೊಲಿಗೆಯನ್ನು ಹಾಕಲು ಮರೆಯಬೇಡಿ. ಫ್ಲೈಯನ್ನು ಈಪೆನ್ ಮಾಡಿ. ಹೊಲೆದಿರುವ ಭಾಗ ನೋದಲು ಹೀಗೆ ಕಾಣುತ್ತದೆ. ಸೀಮ್ ಲೈನನ್ನು ನಿಮ್ಮ ಬೆರಳಿನಿಂದ ಕ್ರೀಸ್ ಮಾಡಿ. ಈಗ ಫ್ಲೈಯನ್ನು ತಪ್ಪಾದ ಭಾಗದ ಮೇಲೆ ತೋರಿಸಿರುವಂತೆ ಟುಟೋರಿಯಲಿನಲ್ಲಿ ತೋರಿಸಿದಂತೆ ಇಡಿ.








ನಾವು ಈ ಪೋಲ್ಡನ್ನು ಟ್ರೌಶರಿನ ಎಡಭಾಗದ ಕಾಲಿನ ಸೀಮ್ ಲೈನಿನ ಫ್ಲೈಯನ್ನು ಟ್ರೌಶರಿನ ಬಲಭಾಗದ ಮೇಲೆ ತೋರಿಸಿರುವಂತೆ, ಬಲಭಾಗ ಬಲಭಾಗವನ್ನು ನೋಡುವಂತೆ. ಇದು ಸರಿಯಾಗಿ ಮ್ಯಾಚಾಗಿದೆಯೇ ಖಚಿತಪಡಿಸಿಕೊಳ್ಳಿ, ನಾವು ಬಲಗಾಲು ಮತ್ತು ಎಡಗಾಲಿನ ವೇಸ್ಟ್ ಲೈನ್ಗಳು ಸರಿಯಾಗಿ ಮ್ಯಾಚಾಗುತ್ತಿದೆಯೇ ನೋಡಿಕೊಳ್ಳಿ, ನಾವೀಗ ಜಿಪ್ಪರಿನ ಹೊಲೆಯದೆ ಇರುವ ಭಾಗವನ್ನು ಬಲಗಾಲಿನ ಹೊಲೆಯದೆ ಇರುವ ಫ್ಲೈ ಎಡಗಾಲಿನ ಮೇಲೆ ಹೊಲೆಯಬೇಕು. ಫ್ಲೈಯನ್ನು ಕೆಳಕ್ಕೆ ಹೊಲೆಯದಂತೆ ಗಮನವಹಿಸಿ. ಇದರಿಂದ ನಾವು ಸ್ವಲ್ಪ ಮೇಲಕ್ಕೆ ತೋರಿಸಿದಂತೆ ಎತ್ತಿದ್ದೇವೆ. ಮತ್ತೆ ಈಗ ಜಿಪ್ಪರ್ ಫುಟಿಗೆ. ಬಟ್ಟೆಯನ್ನು ಜಿಪ್ಪರ್ ಫುಟಿನ ಕೆಳಗೆ ಇಟ್ಟು ಹೊಲೆಯಲು ಪ್ರಾರಂಭಿಸಿ. ಈ ಸರ್ತಿ ನಾವು ವೇಸ್ಟಿನಿಂದ ಫ್ಲೈ ಬಾಟಮಿನವರೆಗೂ ಹೊಲೆಯುತ್ತೇವೆ. ನಿಮ್ಮ ಹೊಲೆದಿರುವ ಜಿಪ್ಪರ್ ನೋಡಲು ಹೀಗೆ ಕಾಣಬೇಕು.




ಈಗ ನಾವು ಕ್ರಾಚ್ ಏರಿಯಾದ ಕೆಲಸ ಮಾಡೋಣ. ಜಿಪ್ಪರ್ ಫುಟನ್ನು ರೆಗ್ಯುಲರ್ ಫುಟಿಗೆ ಬದಲಾಯಿಸಿ ಮತ್ತು ಬಟ್ಟೆಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಅಲೈನ್ ಮಾಡಿ. ನಾವು ಫ್ಲೈ ಯಿನ ಎಡ್ಜಿನಿಂದ ಪ್ರಾರಂಭಿಸಿ ಪೂರ್ತಿ ಕ್ರಾಚ್ ಏರಿಯಾವನ್ನು  ಹೊಲೆಯಬೇಕು. ರಿವರ್ಸ್ ಹೊಲಿಗೆ ಹಾಕಲು ಮರೆಯಬೇಡಿ. ಇದಾದ ಮೇಲೆ ದಾರವನ್ನು ಕತ್ತರಿಸಿ.











ಈ ಸೆಕ್ಷನಿಗೆ ಇನ್ನೊಂದು ಹೊಲಿಗೆ. ನಾವು ಶೇಪ್ ಹೊಲಿಗೆಯನ್ನು ಫ್ಲೈ ಭಾಗದ ಮೇಲೆ ಹಾಕಬೇಕು. ಫ್ಲೈಟ್ರೇಸಿಂಗ್ ಟೆಂಪ್ಲೇಟನ್ನು ಫ್ಲೈ ಏರಿಯಾ ಮೇಲೆ ತೋರಿಸಿರುವಂತೆ ಇಡಬೇಕು. ಚಾಲ್ಕಿನಿಂದ ಟೆಂಪ್ಲೇಟನ್ನು ಮಾರ್ಕ್ ಮಾಡಿ ಹೊಲೆಯಲು ಶುರುಮಾಡಿ. ಕೊನೆಯನ್ನು ತಲುಪಿದಾಗ ನಿಲ್ಲಿಸ್ ಜಿಪ್ಪನ್ನು ಕ್ಲೋಸ್ ಮಾಡಿ. ಫ್ಲೈಯಿನ ಬಲಭಾಗವನ್ನು ತೆಗೆದುಕೊಂಡು ಅದನ್ನು ಜಿಪ್ಪಿನ ಕೆಳಕ್ಕೆ ತಳ್ಳಿ ಅದರ ಏಲೆ ಹೊಲೆಯಿರಿ. ದಾರವನ್ನು ಕತ್ತರಿಸಿ. ನಿಮ್ಮ ಫ್ಲೈ ಮತ್ತು ಜಿಪ್ ಸೆಕ್ಷನ್ ನೋಡಲು ಹೀಗೆ ಕಾಣಬೇಕು.  ನಾವು ತೋರಿಸಿದಂಟೆ ಶೇಪ್ ಸ್ಟಿಚನ್ನು ಮುಗಿಸಿದ್ದೇವೆ.

ವೇಸ್ಟ್ ಲೈನಿನ ಕಡೆಗೆ ಮುಂದುವರೆಯೋಣ. ಹೆಚ್ಚಾದ ಫ್ಲೈ ಪೀಸನ್ನು ಕತ್ತರಿಯಿಂದ ಕತ್ತರಿಸಿ. ನಾವು ಜಿಪನ್ನು ಹೊಲೆಯುವುದರೊಂದಿಗೆ ಲಾಕ್ ಮಾಡೋಣ. ಜಿಪ್ ಮಾಡಿರುವ ಭಾಗವನ್ನು ಪ್ರೆಸ್ಸರ್ ಫುಟಿನ ಕೆಳಗೆ ಇಟ್ಟು ಅಡವಾಗಿ ಹೊಲೆಯಿರಿ. ದಾರವನ್ನು ಕತ್ತರಿಸಿ. ನಾವು ಇದೇ ವಿಧಾನವನ್ನು ಜಿಪ್ಪರಿನ ಇನ್ನೊಂದು ಕಡೆಗೂ ಮಾಡಬೇಕು. ಜಿಪನ್ನು ಕ್ಲೋಸ್ ಮಾಡಿ ಮತ್ತು ಇದು ರೇಷ್ಮೆಯಂತೆ ಮೃದುವಾಗಿರಬೇಕು.










## ಹಂತ ೭ : ಹಿಂಭಾಗದ ಪೀಸನ್ನು ತಯಾರಿಸುವುದು

ನಮ್ಮ ಹತ್ತಿರ ಹಿಂಭಾಗದ ಎರಡು ಪೀಸ್ ಇದೆ. ಒಂದು ಬಲಗಾಲಿಗೆ ಮತ್ತೆ ಇನ್ನೊಂದು ಎಡಗಾಲಿಗೆ. ನಾವು ಬಲಗಾಲಿನ ಕೆಲಸ ಮೊದಲು ಮಾಡೋಣ. ನಾವು ಪ್ರಾರಂಭಿಸುವ ಮುನ್ನ ಒಂದು ಸುತ್ತು ಜಿಗ್ ಜಾಗ್ ಹೊಲಿಗೆಯನ್ನು ಈ ಪೀಸಿನ ಕ್ರಾಚ್ ಏರಿಯಾ ಮತ್ತು ಇನ್ನರ್ ಸೀಮಿಗೆ ಹಾಕಬೇಕು. ನಿಮ್ಮ ಹೊಲಿಗೆ ನೋಡಲು ಹೀಗೆ ಕಾಣಬೇಕು. ಹಿಂಭಾಗ ಎಂದು ಮಾರ್ಕ್ ಮಾಡಿರುವ ಟೆಂಪ್ಲೇಟನ್ನು ಬಟ್ಟೆಯ ಹಿಂಭಾಗಕ್ಕೆ ಇಡಬೇಕು. ನಿಮ್ಮ ಗಮನವನ್ನು ಮೂರು ನಾಚಸಿನ ಕಡೆಗೆ ತಿರುಗಿಸಿ. ಮತ್ತು ಒಂದು ಪಾಯಿಂಟ್ ಟ್ರೌಶರಿನ ಮೇಸ್ಟ್ ಲೈನಿನ ಹತ್ತಿರ. ಚಾಲ್ಕಿನಿಂದ ಇದನ್ನು ಮಾರ್ಕ್ ಮಾಡಿ.

ಟೆಂಪ್ಲೇಟನ್ನು ಪಕ್ಕಕಿಡಿ. ಈ ಮೂರು ನಾಚಸನ್ನು ಡಾಟಿಗೆ  ಸ್ಕೇಲಿನ ಸಹಾಯದಿಂದ ಸೇರಿಸಿ. ಈ ಗೆರೆಗಳೂ ಟ್ರೌಶರಿಗೆ ಡಾರ್ಟ್ ಗಳು. ಈಗ ಅದನ್ನು ಹೊಲೆಯೋಣ.
ಮಧ್ಯದ ಗೆರೆ ಮೇಲೆ ಬಟ್ಟೆಯನ್ನು ತೋರಿಸಿರುವಂತೆ  ಮಡಚಿ. ಫೋಲ್ಡನ್ನು ಮಡಚಿ ಪ್ರೆಸ್ಸರ್ ಫುಟಿನ ಕೆಳಗೆ ಅಲೈನ್ ಮಾಡಿ. ಮಷೀನನ್ನು ನೇರ ಹೊಲಿಗೆಗೆ ನತ್ತು ಹೊಲಿಗೆಯ ಉದ ೨.೫ ಇರಬೇಕು. ಪಾಯಿಂಟಿನಿಂದ  ಹೊಲೆಯಲು ಪ್ರಾರಂಭಿಸಿ ನಾಚಿನ ಕಡೆಗೆ ಹೊಲೆಯಿರಿ. ರಿವರ್ಸ್ ಹೊಲಿಗೆಯನ್ನು ಕೊನೆಯಲ್ಲಿ ಹಾಕಿ.



ಡಾರ್ಟ್ ಹೀಗೆ ಕಾಣುತ್ತದೆ.ಓವರ್ ಏಡ್ಜಿಂಗಿನ ಪೂರ್ತಿ ವಿಧಾನ ಎಡ್ಜಿಂಗಿನ ಮೇಲೆ ಮತ್ತು ಡಾರ್ಟ್ಸ್ ಅನ್ನು ಹಿಂಭಾಗದ ಪೀಸಿಗೂ ಪುನರಾವರ್ತಿಸಬೇಕು.






ಹಂತ ೮ : ಪಾಕೆಟನ್ನು ಹಿಂಭಾಗದ ಪೀಸಿಗೆ ಸೇರಿಸುವುದು

ನಮ್ಮ ಹತ್ತಿರ ಎರಡೂ ಹಿಂಭಾಗದ ಪೀಸ್ ತಯಾರಾಗಿದೆ. ನಾವು ಹಿಂಭಾಗದ ಪೀಸಿನ ಎಡಗಾಲನ್ನು ಹೊಲೆಯೋಣ. ನಮ್ಮ ಹತ್ತಿರ ಹಿಂಭಾಗದ ಪಾಕೆಟ್ ಲೈನಿಂಗ್ ಇದೆ. ಮೇನ್ ಬಟ್ಟೆ ಪಾಕೆಟ್ ಪೀಸ್ ಮತ್ತು ಫ್ಯುಸಿಂಗ್ ಪೀಸಸ್ ತಯಾರಾಗಿದೆ. ಈ ಎರಡು ಸಣ್ಣ ಪಾಕೆಟನ್ನು ಮೇನ್ ಬಟ್ಟೆಯಿಂದ ಕಟ್ ಮಾಡಿ ನಾವು ಎಲ್ಲಾ ಕಡೆನೂ ಜಿಗ್ ಜಾಗ್ ಹೊಲಿಗೆಯನ್ನು ಅಚ್ಚುಕಟ್ಟಾದ ಫಿನಿಷಿಂಗಾಗಿ ಮಾಡಬೇಕು. ನೋಡಿ ಬಟ್ಟೆ ಎಷ್ಟು ಚೆನ್ನಾಗಿ ಕಾಣುತ್ತಿದೆ.









ಲೈನಿಂಗ್ ಬಟ್ಟೆಯನ್ನು ತೆಗೆದುಕೊಂಡು ಅದನ್ನು ಟ್ರೌಶರಿನ ಹಿಂಭಾಗದ ಪೀಸನ್ನು ಮೇಲೆ ಬರುವಂತೆ ಇಡಬೇಕು. ಸರಿಯಾದ ಪ್ಲೇಸ್ ಮೆಂಟ್ ಇದೆಯೇ ನೋಡಿಕೊಂಡು ೩ ೧/೪ ಇಂಚು ವೇಸ್ಟ್ ಲೈನಿನಿಂದ ಅಳತೆ ಮಾಡಿ ಮಾರ್ಕ್ ಮಾಡಿ. ನಾವು ೧ ಇಂಚು ಮಾರ್ಕನ್ನು ಪಾಕೆಟ್ ಲೈನಿಂಗಿನಿಂದ ಮ್ಯಾಚ್ ಮಾಡಿ ಪ್ಯಾಂಟ್ ಮೇಲೆ ಮಾರ್ಕ್ ಮಾಡಿ. ಮತ್ತೆ ಪಾಕೆಟ್ ಲೈನಿಂಗನ್ನು ಇಡಬೇಕು. ಪಾಕೆಟ್ ಪ್ಯಾಂಟಿನ ಅಗಲಕ್ಕೆ ಮಧ್ಯದಲ್ಲಿದೆಯೇ ನೋಡಿಕೊಳ್ಳಿ









ಹಿಂಭಾಗದ ಪಾಕೆಟ್ ಟೆಂಪ್ಲೇಟನ್ನು ಪಾಕೆಟ್ ಲೈನಿಂಗ್ ಮೇಲೆ ಇಡಬೇಕು. ಟೆಂಪ್ಲೇಟಿನ ಓಪೆನಿಗ್ ಲೈನಿಂಗ್ ಬಟ್ಟೆ ಮೇಲೆ ಮಾರ್ಕ್ ಮಾಡಬೇಕು. ಚಾಲ್ಕನ್ನು ಬಳಸಿ ಎರಡು ಪಾಯಿಂಟನ್ನು ಮಾರ್ಕ್ ಮಾಡಿ. ಟೆಂಪ್ಲೇಟನ್ನು ಪಕ್ಕಕ್ಕಿಡಿ. ಈಗ ಎರಡು ಪಾಯಿಂಟನ್ನು ಸ್ಕೇಲಿನಿಂದ ಮಾರ್ಕ್ ಮಾಡೋಣ. ನಾವು ಆಯತಾಕಾರದ ಬಾಕ್ಸನ್ನು ಈ ಗೆರೆಯ ಸುತ್ತ ಮಾಡೋಣ. ಮೇಲಿನಿಂದ ಮತ್ತು ಕೆಳಗಿನಿಂದ ೧/೪ ಇಂಚು ಬಿಟ್ಟು ಸೈಡ್ ಗಳೀಗೆ ಎಷ್ಟು ಸಾಧ್ಯಾನೂ ಅಷ್ಟು ಹತ್ತಿರ ಹೊಲೆಯಿರಿ.









ಪಾಕೆಟನ್ನು ಪ್ರೆಸ್ಸರ್ ಫುಟಿನ ಕೆಳಗೆ ಅಲೈನ್ ಮಾಡಿ ಮತ್ತು ರೆಗ್ಯುಲರ್ ನೇರ ಹೊಲಿಗೆಯನ್ನು ಲೈನಿನ ಸುತ್ತ ಹಾಕಬೇಕು. ಕಾರ್ನರನ್ನು ತಲುಪಿದಾಗ ಪಿವಟಿಂಗ್ ಟೆಕ್ನಿಕ್ ಬಳಸಿ ಮುಂದುವರೆಯಿರಿ. ಎಲ್ಲಾ ಕಡೆನೂ ಆಯಾತಾಕಾರ ಬರಲು ಹೊಲೆಯಿರಿ. ಇದಾದ ಮೇಲೆ ದಾರವನ್ನು ಕತ್ತರಿಸಿ. ನಿಮ್ಮ ಹೊಲಿಗೆಗಳು ನೋಡಲು ಹೀಗೆ ಕಾಣಬೇಕು. ನಾವೀಗ ಈ ಲೈನ್ ಮೇಲೆ ಪಾಕೆಟಿಗೆ ಓಪೆನಿಂಗ್ ಮಾಡಲು ಕಟ್ ಮಾಡಬೇಕು. ಸಣ್ಣ ಕತ್ತರಿಯನ್ನು ತೆಗೆದುಕೊಂಡು ಬಟ್ಟೆಯನ್ನು ಮಡಚಿ ಸ್ಲಾಶ್ ಮಾಡಬೇಕು. ಇದು ಕತ್ತರಿಯನ್ನು ಒಳಕ್ಕೆ ಹೋಗಲು ಸಹಾಯವಾಗುತ್ತದೆ ಮತ್ತು ಅಚ್ಚುಕಟ್ಟಾದ ಕಟನ್ನು ಕೊಡುತ್ತದೆ. ಕಾರ್ನರ್ ಗಳನ್ನು ತೋರಿಸಿರುವಂತೆ ಕಟ್ ಮಾಡಿ. ಮುಗಿಯಿತು. ಇದು ಓಪೆನಿಂಗ್.








ನೀವು ನೋಡಬಹುದು ಪಾಕೆಟ್ ಟ್ರೌಶರಿನ ಬಲಭಾಗಕ್ಕೆ ಇದೆ. ನಾವು ಗ್ಯಾಪನ್ನು ಬಳಸಿ ಮತ್ತು ಪಾಕೆಟನ್ನು ಟ್ರೌಶರಿನ ತಪ್ಪಾದ ಭಾಗಕ್ಕೆ ಕಳಸಬೇಕು. ಈಗ ಐರನ್ ಮಾಡುವ ಸಮಯ. ಹೊಲೆಯುವಾಗ ಮಾಡಿರುವ ಸೀಮ್ ಲೈನನ್ನು ಫ್ಲಾಟ್ ಮಾಡಿ ಐರನ್ ಮಾಡಬೇಕು. ಇದು ಸರಿಯಾಗಿ ಕೂರಬೇಕು. ತೋರಿಸಿರುವ ಏರಿಯಾದ ಮೇಲೆ ಐರನ್ ಮಾಡಿ.ಸೀಮ್ ಲೈನ್ ಹೇಗೆ ಸೆಟಲ್ ಆಗಿದೆ ನೋಡಿ.




ನಂತರ ಬರುವುದು, ಪಾಕೆಟ್ ಓಪೆನಿಂಗನ್ನು ಮುಗಿಸುವುದು. ಇದಕ್ಕೆ ನಮಗೆ ಬೇಕಾಗಿರುವುದು ಹಿಂದೆ ಓವರ್ ಎಡ್ಜ್ ಮಾಡಿರುವ ಪಾಕೆಟ್ ಸ್ಟ್ರಿಪ್ ಫ್ಯುಸಿಂಗಿನೊಂದಿಗೆ. ಗ್ಲೂ ಮಾಡಿರುವ ಸೈಡನ್ನು ಮೇನ್ ಬಟ್ಟೆಯ ಪಾಕೆಟ್ ಫೀಸಿನ ತಪ್ಪಾದ ಭಾಗದ ಮೇಲಿಡಿ.




ನಮಗೆ ಇನ್ನೊಂದು ಮೇನ್ ಬಟ್ಟೆಯ ಸ್ಟ್ರಿಪ್ ಫ್ಯುಸಿಂಗಿನ ಸಮವಾದ ಅಳತೆಯದ್ದು ಬೇಕಾಗುತ್ತದೆ. ಫ್ಯುಸಿಂಗಿನ ಗ್ಲೂ ಭಾಗವನ್ನು ಮೇನ್ ಬಟ್ಟೆಯ ಹಿಂಭಾಗಕ್ಕೆ ಇಡಿ. ಫ್ಯುಸಿಂಗ್ ಮೇಲೆ ಐರನ್ ಮಾಡಿ ಅದು ಮೇನ್ ಬಟ್ಟೆಗೆ ಅಂಟಿಕೊಳ್ಳುತ್ತದೆ. ಇದನ್ನು ಎರಡನೆ ಸ್ಟ್ರಿಪಿಗೂ ಮುಂದುವರಿಸಿ.




ನಾವು ಈ ಎರಡು ಸ್ಟ್ರಿಪನ್ನು ಮಧ್ಯದ ಗ್ಯಾಪ್ ಮೇಲೆ ಅದನ್ನು ಮುಚ್ಚಲು ಹೊಲೆಯಬೇಕು. ಇದನ್ನು ಹೇಗೆ ಮಾಡುವುದು ನೋಡೋಣ. ಮೊದಲು ತೆಳುವಾದ ಸ್ಟ್ರಿಪನ್ನು ತೆಗೆದುಕೊಂಡು ಅದನ್ನು ಅರ್ಧಕ್ಕೆ ಮಡಚಿ. ನಿಮ್ಮ ಬೆರಳಿನಿಂದ ಕ್ರೀಸ್ ಮಾಡಿ. ಮಡಚಿರುವ ಸ್ಟ್ರಿಪನ್ನು ಪಾಕೇಟಿನ ಮೇಲ್ಭಾಗದ ತುದಿಯ ಮೇಲಿಟ್ಟು, ಅದು ಪಾಕೆಟ್ ಓಪೆನಿಂಗಿನ ಮಧ್ಯದವರೆಗೂ ಮರುವವರೆಗೂ ಇಡಬೇಕು. ನಾವು ಸ್ಟ್ರಿಪನ್ನು ಪಾಕೆಟ್ ಲೈನಿಂಗಿಗೆ ಪಿನ್ ಮಾಡಬೇಕು. ಟ್ರೌಶರ್ ಬಟ್ಟೆಯನ್ನು ಪಿನ್ ಮಾಡದಂತೆ ನೋಡಿಕೊಳ್ಳಿ ಈಗ ದೊಡ್ಡ ಫಿಸನ್ನು ತೆಗೆದುಕೊಂಡು ಫ್ಯುಸಿಂಗಿನ ವರೆಗೂ ಮಡಚಿ. ಇದನ್ನು ಪಾಕೆಟಿನ ಬಾಟಮ್ ತುದಿಯಲ್ಲಿ ಇಡಬೇಕು ಅದು ಮಧ್ಯದ ಓಪೆನಿಂಗ್ ಮೇಲೆ ಬರಬೇಕು. ಈ ಪೀಸನ್ನೂ ಪಿನ್ ಮಾಡಿ. ನಾವು ಹೊಲೆಯಲು ಪ್ರಾರಂಭಿಸುವ ಮುನ್ನ ಎರಡನೆ ಪಾಕೆಟ್ ಬಟ್ಟೆ ಇಲ್ಲಿ ಇಡಬೇಕು. ಈಗ ಮಷೀನ್ ಹತ್ತಿರ ಹೋಗೋಣ.






ಮೊದಲಿಗೆ , ನಾವು ಟಾಪ್ ಓಪನಿಂಗಿನ ಮೇಲ್ಭಾಗವನ್ನು ಹೊಲೆಯೋಣ ಗ್ಯಾಪನ್ನು ತೆರೆದು ಅದನು ತಿರುಗಿಸಿ. ನಾವು ಸೀಮ್ ಅಲ್ಲೋಯನನ್ನು ಹೊಲೆಯೋಣ ಅದನ್ನು ಪ್ರೆಸ್ಸರ್ ಫೂಟಿನ ಕಳಗೆ ಅಲೈನ್ ಮಾಡಿ. ಹೊಲೆಯಲು ಪ್ರಾರಂಭಿಸಿ. ಒಮ್ಮೆ ತುದಿಯನ್ನು ತಲುಪಿದಾಗ, ದಾರವನ್ನು ಕತ್ತರಿಸಿ ಪಿನ್ನನ್ನು ತೆಗೆಯಿರಿ. ಬಲ ಭಾಗದಿಂದ ಮೇಲ್ಭಾಗದ ಓಪನಿಂಗ್ ನೋಡಲು ಹೀಗೆ ಕಾಣುತ್ತದ್ದೆ.




ಈಗ ಇದೇ ವಿಧಾನವನ್ನು ಅಗಲದ ಸ್ಟ್ರಿಪಿಗೂ ಮಾಡೋಣ.ಬಟ್ಟೆಯನ್ನು ತಿರುಗಿಸಿ ಮತ್ತು ನಾವು ಸೀಮ್ ಅಲೋಯನನ್ನು ಹೊಲೆಯಬೇಕು. ಬಟ್ಟೆಯನ್ನು ಪ್ರೆಸ್ಸರ್ ಫೂಟಿನ ಕಳಗೆ ಅಲೈನ್ ಮಾಡಿ. ಹೊಲೆಯಲು ಪ್ರಾರಂಭಿಸಿ.ಫೋಲ್ಡ್ ಪ್ರೆಸ್ಸರ್ ಫುಟಿನ ಕೆಳಗೆ ಸರಿಯಾಗಿ ಇಡಬೇಕು. ಇದಾದ ಮೇಲೆ ದಾರವನ್ನು ಕತ್ತರಿಸಿ. ಹಿಂಭಾಗದಲ್ಲಿ ನಿಮ್ಮ ಹೊಲಿಗೆ ನೋಡಲು ಹೀಗೆ ಕಾಣಬೇಕು.






ಬಾಟಮ್ ಓಪೆನಿಂಗಿಗೆ ಸೇರಿಸಿರುವ ಎರಡನೆ ಸ್ಟ್ರಿಪನ್ನು ಪಾಕೆಟ್ ಲೈನಿಂಗಿಗೆ ಹೊಲೆಯಬೇಕು. ಗಮನದಲ್ಲಿರಲಿ ನಾವು ಬರಿ ಬಟಮ್ ಸ್ಟ್ರಿಪನ್ನು ಲೈನಿಂಗ್ ಬಟ್ಟೆಗೆ ಹೊಲೆಯಬೇಕು ಮೇನ್ ಬಟ್ಟೆಗೆ ಅಲ್ಲಾ. ಬಟ್ಟೆಯನ್ನು ಪ್ರೆಸ್ಸರ್ ಫೂಟಿನ ಕಳಗೆ ಅಲೈನ್ ಮಾಡಿ. ಹೊಲೆಯಲು ಪ್ರಾರಂಭಿಸಿ. ಎಡ್ಜ್ ನಲ್ಲಿ ಪಿವಟ್ ಮಾಡಿ ಎಲ್ಲಾ ಮೂರು ಕಡೆ ಹೊಲೆಯಿರಿ. ದಾರವನ್ನು ಕತ್ತರಿಸಿ. ಇನ್ನೊಂದು ಪೀಸ್ ಬಾಕಿ ಇದೆ. ಪಾಕೆಟ್ ಲೈನಿಂಗಿಗೆ ಮೇನ್ ಬಟ್ಟೆಯಿಂದ ಕಟ್ ಮಾಡಿದ ಸಣ್ಣ ಪಾಕೆಟ್ ಪೀಸನ್ನು ಪಾಕೆಟ್ ಲೈನಿಂಗಿಗೆ ಹೊಲೆಯಬೇಕು. ಪಾಕೆಟ್ ಲೈನಿಂಗಿಗೆ ಬಾಟಮ್ ಎಡ್ಜ್ ಹೊಂದುವಂತೆ ಇಡಬೇಕು. ಪ್ರೆಸ್ಸರ್ ಫೂಟಿನ ಕಳಗೆ ಅಲೈನ್ ಮಾಡಿ.




ಹೊಲೆಯಲು ಪ್ರಾರಂಭಿಸಿ.ಕಾರ್ನರ್ ಗಳಲ್ಲಿ ಪಿವಟ್ ಮಾಡಿ ಮತ್ತು ಎಲ್ಲಾ ಕಡೆ ಹೊಲೆಯಿರಿ. ನಿಮ್ಮ ಹೊಲಿಗೆಗಳು ನೋಡಲು ಹೀಗೆ ಕಾಣಬೇಕು.




ವೀಡಿಯೋದಲ್ಲಿ ತೋರಿಸಿದಂತೆ ಪಾಕೆಟನ್ನು ಅರ್ಧಕ್ಕೆ ಮಡಚಬೇಕು. ಪಾಕೆಟ್ ಲೈನಿಂಗಿನ ಎರಡು ಓಪೆನ್ ಎಡ್ಜನ್ನು ನಂತರ ಹೊಲೆಯಬೇಕು. ಎಡ್ಜನ್ನು ಎರಡೂ ಪದರದ ಒಳಕ್ಕೆ ೧/೪ ಇಂಚು ಮಡಚಿ. ಮಡಚಿರುವ ಬಟ್ಟೆಯನ್ನು ಪ್ರೆಸ್ಸೆರ್ ಫೂಟಿನ ಕೆಳಗೆ ಅಲೈನ್ ಮಾಡಿ. ಹೊಲೆಯಲು ಪ್ರಾರಂಭಿಸಿ. ಮಡಚಿರುವ ಭಾಗ ಸರಿಯಾಗಿದೆಯೇ ನೋಡಿಕೊಳ್ಳಿ ಕೊನೆಯನ್ನು ತಲುಪಿದಾಗ, ದಾರವನ್ನು ಕತ್ತರಿಸಿ. ಇದೇ ವಿಧಾನವನ್ನು ಇನ್ನೊಂದು ಕಡೆಗೂ ಮಾಡಿ. ನಿಮ್ಮ ಹೊಲಿಗೆಗಳು ನೋಡಲು ಹೀಗೆ ಕಾಣಬೇಕು.




ನಾವು ಎರಡೂ ಪದರವನ್ನು ಭದ್ರಗೊಳಿಸಬೇಕು ಅದಕ್ಕೆ ಎಡ್ಜ್ ಸ್ಟಿಚನ್ನು ಪಾಯಿಂಟೆಡ್ ಸೆಕ್ಷ್ ನಿಗೆ ಹಾಕಬೇಕು. ಬಟ್ಟೆಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಅಲೈನ್ ಮಾಡಿ. ನಿಧಾನವಾಗಿ ಮತ್ತು ಸ್ಥಿರವಾಗಿ ಕರ್ವ್ ಗಳಲ್ಲಿ ಹೊಲೆಯಿರಿ. ಪ್ರಾರಂಭದಲ್ಲಿ ಮತ್ತು ಕೊನೆಯಲ್ಲಿ ರಿವರ್ಸ್ ಹೊಲಿಗೆ ಹಾಕಲು ಮರೆಯಬೇಡಿ.






ಹೆಚ್ಚಾದ ಪಾಕೆಟನ್ನು ಕತ್ತರಿಯಿಂದ ಕತ್ತರಿಸಿ. ನಾವು ಓಪೆನ್ ಎಂಡಿನ ಮೇಲೆ ಹೊಲೆಯಬೇಕು. ಎಡ್ಜನ್ನು ಕಾಲು ಇಂಚು ಮಡಚಿ ಅದನ್ನು ಪ್ರೆಸ್ಸರ್ ಫುಟಿನ ಕೆಳಗೆ ಅಲೈನ್ ಮಾಡಿ. ಹೊಲೆಯಲು ಪ್ರಾರಂಭಿಸಿ. ಇದೇ ವಿಧಾನವನ್ನು ಇನ್ನೊಂದು ಕಡೆಗೂ ಮಾಡಿ. ನಿಮ್ಮ ಹೊಲಿಗೆಗಳು ನೋಡಲು ಹೀಗೆ ಕಾಣಬೇಕು. ಈಗ ಬಾಟಮ್ ಓಪೆನ್ ಭಾಗವನ್ನು ಹೊಲೆಯೋಣ. ಪ್ರೆಸ್ಸರ್ ಫುಟನ್ನು ಅಲೈನ್ ಮಾಡಿ ಹೊಲೆಯಿರಿ.




ನಮ್ಮ ಹಿಂಭಾಗದ ಪಾಕೆಟ್ ತಯಾರಾಗಿದೆ.ಬಲಗಾಲಿಗೆ ಹಿಂಭಾಗದ ಪಾಕೆಟ್ ಮಾಡಲು ಇದೇ ವಿಧಾನವನ್ನು ಅನುಸರಿಸಬೇಕು.




## ಹಂತ ೯ : ಹಿಂಭಾಗದ ಪೀಸನ್ನು ಒಟ್ಟಿಗೆ ಹೊಲೆಯಬೇಕು.




ಒಮ್ಮೆ ಎರಡು ಹಿಂಭಾಗದ ಪೀಸ್ ತಯಾರಾದ ಮೇಲೆ, ನಾವು ಅದನ್ನು ಒಟ್ಟಿಗೆ ಸೇರಿಸೋಣ. ಅದನ್ನು ಒಂದರ ಮೇಲೆ ಒಂದನ್ನು ಇಡಬೇಕು, ಬಲಭಾಗ ಬಲಭಾಗವನ್ನು ನೋಡುವಂತಿರಬೇಕು, ನಾವದನ್ನು ಕ್ರಾಚ್ ಹೊಲೆಯುವುದರೊಂದಿಗೆ ಸೇರಿಸೋಣ. ನಾವು ಹೊಲೆಯುವ ಮೊದಲು, ನಾವು ಗ್ಯಾಪನ್ನು ಬೆಲ್ಟ್ ಸೆಕ್ಷನಿಗೆ ಮೇಲ್ಭಾಗದಿಂದ ಬಿಡಬೇಕು. ೩ ೧/೨ ಇಂಚು ಟೇಪಿನಿಂದ ಅಳತೆ ಮಾಡಿ ಮಾರ್ಕ್ ಮಾಡಿ. ನಾವು ಮಾರ್ಕಿನ ವರೆಗೂ ಹೊಲೆಯಬೇಕು.























ಬಟ್ಟೆಯನ್ನು ಪ್ರೆಸ್ಸರ್ ಫೂಟಿನ ಕಳಗೆ ಅಲೈನ್ ಮಾಡಿ. ಹೊಲೆಯಲು ಪ್ರಾರಂಭಿಸಿ. ಸ್ಥಿರವಾದ ಕೈಯನ್ನು ಇಟ್ಟುಕೊಂಡು ನಿಧಾನವಾಗಿ ಹೊಲೆಯಿರಿ ಏಕೆಂದರೆ ಬೆಟ್ಟೆ ಕರ್ವ್‌ಗಿದೆ. ಒಮ್ಮೆ ಮಾರ್ಕನ್ನು ತಲುಪಿದಾಗ ನಿಲ್ಲಿಸಿ ಹೊಲಿಗೆಯನ್ನು ಭದ್ರಗೊಳಿಸಲು ರಿವರ್ಸ್ ಹೊಲಿಗೆ ಹಾಕಿ. ನಿಮ್ಮ ಹೊಲಿಗೆಗಳು ನೋಡಲು ಹೀಗ ಕಾಣಬೇಕು, ನೀವು ನೋಡಬಹುದು, ನಾವು ಮಾರ್ಕಿನವರೆಗೂ ಹೊಲೆದಿದ್ದೇವೆ.

## ಹಂತ ೧೦ : ಮುಂಭಾಗ ಮತ್ತು ಹಿಂಭಾಗದ ಪೀಸನ್ನು ಒಟ್ಟಿಗೆ ಸೇರಿಸುವುದು

ಟ್ರೌಶರಿನ ಹಿಂಭಾಗವನ್ನು ತೆರೆಯಿರಿ. ಟ್ರೌಶರಿನ ಮುಂಭಾಗದ ಪೀಸನ್ನು ಅದರ ಮೇಲಿಡಿ. ಬಲಭಾಗ ಬಲಭಾಗವನ್ನು ನೋಡುವಂತಿರಬೇಕು. ನಾವು ಎರಡು ಪೀಸನ್ನೂ ಸೈಡ್ ಸೀಮ್ ಮತ್ತು ಇನ್ನರ್ ಸೀಮನ್ನು ಹೊಲೆಯುತ್ತಾ ಎರಡು ಪೀಸನ್ನು ಸೇರಿಸೋಣ.

ಒಂದು ಕಡೆಯ ಸೈಡ್ ಸೀಮನ್ನು ಪ್ರೆಸ್ಸರ್ ಫುಟಿನ ಕೆಳಗೆ ಅಲೈನ್ ಮಾಡಿ ನೇರ ಹೊಲಿಗೆಯನ್ನು ಪೂರ್ತಿ ಸೈಡ್ ಸೀಮಿನ ಮೇಲೆ ಹಾಕಲು ಪ್ರಾರಂಭಿಸಿ.ಪ್ಯಾಂಟಿನ ಬಾಟಮಿನವರೆಗೂ ಪೂರ್ತಿ ಹೊಲೆಯಿರಿ. ಕೊನೆಯನ್ನು ತಲುಪಿದಾಗ ರಿವರ್ಸ್ ಹೊಲಿಗೆಯಿಂದ ಮುಗಿಸಿ. ಇದೇ ರೀತಿ ನಾವು ಇನ್ನೊಂದು ಸೈಡ್ ಸೀಮನ್ನು ಮುಗಿಸೋಣ.

ಈಗ ಇನ್ನರ್ ಸೀಮಿನ ಕಡೆ ಹೋಗೋಣ. ಈ ಹೊಲಿಗೆ ಸ್ವಲ್ಪ ಬೇರೆ ರೀತಿ, ನಾವು ನಿರಂತರವಾದ ಹೊಲಿಗೆಯನ್ನು ಒಂದು ಕಾಲಿನಿಂದ ಕ್ರಾಚಿನ ಕಡೆಗೆ ಹೊಲೆಯುತ್ತಾ ಇನ್ನೊಂದು ಕಾಲಿನ ಕೊನೆವರೆಗೂ ಹೊಲೆಯಬೇಕು. ಇನ್ನರ್ ಸೀಮನ್ನು ಪ್ರೆಸ್ಸರ್ ಫುಟಿನ ಕೆಳಗೆ ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ. ಕ್ರಾಚ್ ಏರಿಯಾವನ್ನು ತಲುಪಿದಾಗ ನಿಧಾನ ಮಾಡಿ ಅದನ್ನು ಸರಿಯಾಗಿ ಹೊಲೆಯಿರಿ. ಇನ್ನೊಂದು ಕಾಲಿನ ಬಾಟಮಿನವರೆಗೂ ಹೊಲೆಯಿರಿ ರಿವರ್ಸ್ ಹೊಲಿಗೆಯಿಂದ ಮುಗಿಸಿ. ಇದು ಹೊಲೆದಿರುವ ಸೈಡ್ ಸೀಮ್. ಇದು ಇನ್ನರ್ ಸೀಮ್ ಮತ್ತು ಕ್ರಾಚ್

## ಹಂತ ೧೧ : ವೇಸ್ಟ್ ಬ್ಯಾಂಡನ್ನು ತಯಾರಿಸುವುದು

ನಾವು ಮುಂದೆ ಟ್ರೌಶರಿನ ಆಸಕ್ತಿದಾಯಕವಾದ ಭಾಗದ ಕೆಲಸ ಮಾಡೋಣ. ವೇಸ್ಟ್ ಬ್ಯಾಂಡ್ ಇದನ್ನು ಇಲ್ಲಿ ಸೇರಿಸುತ್ತೇವೆ. ಜಿಪ್ಪರನ್ನು ಓಪೆನ್ ಮಾಡಿ. ಮೆಶರಿಂಗ್ ಟೇಪನ್ನು ತೆಗೆದುಕೊಂಡು ಫ್ಲೈ ಯಿನ ಪ್ರಾರಂಭದಿಂದ ಹಿಂಭಾಗದ ಮಧ್ಯಕ್ಕೆ ತೋರಿಸಿರುವಂತೆ ಅಳತೆ ಮಾಡಿ. ಅಳತೆ ವೇಸ್ಟ್ ಲೈನಿನ ಅರ್ಧವಿರುತ್ತದೆ. ಇದು ನಮ್ಮ ಪ್ಯಾಂಟಿಗೆ ೧೯ ೧/೨ ಇಂಚು ಇರುತ್ತದೆ.

ಟ್ರೌಶರನ್ನು ಪಕ್ಕಕಿಟ್ಟು ಟ್ರೌಶರಿನ ಮಿಕ್ಕಿರುವ ಬಟ್ಟೆಯನ್ನು ತೆಗೆದುಕೊಳ್ಳಿ ಈಗ ಕಾನ್ವಾಸ್ ಸ್ಟ್ರಿಪನ್ನು ತೆಗೆದುಕೊಂಡು ಅದನ್ನು ತೆರೆಯಿರಿ. ಮೆಶರಿಂಗ್ ಟೇಪಿನ ಸಹಾಯದಿಂದ ೧೯ ೧/೨ ಇಂಚು ಅಳತೆ ಮಾಡಿ ಇದು ವೇಸ್ಟ್ ಲೈನಿನ ಅರ್ಧವಿರುತ್ತದೆ. ಜೊತೆಗೆ ೨ ಇಂಚು ಹೆಚ್ಚು. ೨೧ ೧/೨ ಇಂಚು ಮಾರ್ಕ್ ಮಾಡಿ. ಕಾನ್ವಾಸನ್ನ ಈ ಮಾರ್ಕ್ ಮೇಲೆ ಕಟ್ ಮಾಡಿ. ನಮಗೆ ಇನ್ನೊಂದು ಕಾನ್ವಾಸಿನ ಸ್ಟ್ರಿಪ್ ಬೇಕಾಗುತ್ತದೆ. ಇದು ೧೯ ೧/೨ ಇಂಚು ಅಳತೆಯದ್ದಾಗಿದೆ. ಅಳತೆ ಮಾಡಿ ಮಾರ್ಕ್ ಮಾಡಿ.

ಒಂದು ಸ್ಟ್ರಿಪನ್ನು ಬಟ್ಟೆಯ ತಪ್ಪಾದ ಭಾಗದ ಮೇಲೆ ಇಟ್ಟು ಫ್ಯುಸ್ ಮಾಡಲು ಐರನ್ ಮಾಡಬೇಕು. ಐರನ್ ಸರಿಯಾಗಿ ಕೊನೆಯಿಂದ ಕೊನೆಗೆ ಮಾಡಬೇಕು. ಇದೇ ವಿಧಾನವನ್ನು ಇನ್ನೊಂದು ಸ್ಟ್ರಿಪಿಗೂ ಮಾಡಬೇಕು. ಒಮ್ಮೆ ಸ್ಟ್ರಿಪ್ಸನ್ನು ಫ್ಯುಸ್ ಮಾಡಿದ ಮೇಲೆ ನಾವು ಅದರ ಸುತ್ತಲೂ ಸೀಮ್ ಅಲೋಯನ್ಸನ್ನು ಮಾಡಬೇಕು. ಮೊದಲು ಸಣ್ಣ ಸ್ಟ್ರಿಪಿನ ಕೆಲಸ.




ನಮಗೆ ೧/೨ ಇಂಚು ಅಲೋಯನ್ಸ್ ಬೇಕು. ಕಾನ್ವಾಸ್ ಸ್ಟ್ರಿಪಿನಿಂದ ಮೇಲ್ಭಾಗಕ್ಕೆ ಅರ್ಧ ಇಂಚು  ಸಮವಾದ ಜಾಗದಲ್ಲಿ ಮಾರ್ಕ್ ಮಾಡಿ. ಬಾಟಮಿನಲ್ಲೂ, ಸ್ಟ್ರಿಪಿನ ಸೈಡಿನಲ್ಲೂ ೧/೨ ಇಂಚು ಪಾಯಿಂಟ್ ಮಾರ್ಕ್ ಮಾಡಿ. ಸ್ಕೇಲನ್ನು ಬಳಸಿ ಬಾಕ್ಸನ್ನು ಅದರ ಸುತ್ತಲೂ ಹಾಕಭೇಕು. ಇದಾದ ಮೇಲೆ ಉದ್ದದ ಸ್ಟ್ರಿಪಿನ ಕಡೆ ಹೋಗೋಣ. ಹೆಗಾದರೂ, ನಾವು ಮಾರ್ಕ್ ಮಾಡೋಣ ೧/೨ ಇಂಚು ಸೈಡಿನಲ್ಲಿ.ಕತ್ತರಿಯನ್ನು ತೆಗೆದುಕೊಂಡು ಮಾರ್ಕ್ ಮಾಡಿರುವ ಲೈನ್ ಮೇಲೆ ಕಟ್ ಮಾಡಿ. ಎಡ್ಜಿನಲ್ಲಿ ಹುಷಾರಾಗಿರಿ ಶಾರ್ಪ್ ಕಟ್ ಬರುವಂತೆ. ನಮ್ಮ ಹತ್ತಿರ ಎರಡು ಸ್ಟ್ರಿಪ್ ಸೀಮ್ ಅಲೋಯನ್ಸಿನೊಂದಿಗೆ ಮತ್ತು ಫ್ಯುಸಿಂಗ್ ಸೇರಿಸಿರುವುದು. ಸ್ಟ್ರಿಪ್ಸನ್ನು ಪಕ್ಕಕಿಡಿ.




ಮಿಕ್ಕಿರುವ ಬಟ್ಟೆಯನ್ನು ತೆಗೆದುಕೊಳ್ಳಿ, ನಮಗೆ ಇನ್ನೊಂದು ಸ್ಟ್ರಿಪ್ ಬೆಲ್ಟ್ ಲೂಪಿಗೆ ಬೇಕು. ಪ್ಲೇನ್ ಕಡೆಯಿಂದ ೧ ೧/೨ ಇಂಚು ಮಾರ್ಕ್ ಮಾಡಿ. ಬೇರೆ ಬೇರೆ ಪಾಯಿಂಟಿನಲ್ಲಿ ಮಾರ್ಕ್ ಮಾಡಿ ಲೈನನ್ನು ಹಾಕಲು ಸುಲಭವಾಗುತ್ತದೆ. ಸ್ಕೇಲನ್ನು ಬಳಸಿ ಲೈನ್ ಹಾಕಿ. ಮಾರ್ಕ್ ಮಾಡಿರುವ ಲೈನ್ ಮೇಲೆ ಕಟ್ ಮಾಡಿ. ನಮ್ಮ ಸ್ಟ್ರಿಪ್ಸ್ ತಯಾರಾಗಿದೆ. ಅದನ್ನು ಅರ್ಧಕ್ಕೆ ತೋರಿಸಿರುವಂತೆ ಮಡಚಿ ಹೊಲೆಯಿರಿ.




ಮಡಚಿರುವ ಸ್ಟ್ರಿಪನ್ನು ಪ್ರೆಸ್ಸರ್ ಫುಟಿನ ಕೆಳಗೆ ಇಟ್ಟು ತೋರಿಸಿರುವಂತೆ ಹೊಲೆಯಲು ಪ್ರಾರಂಭಿಸಿ ಮತ್ತು ಪೋಲ್ಡನ್ನು ಹೊಂದಿಸುತ್ತಾ ಹೋಗಿ. ರಿವರ್ಸ್ ಹೊಲಿಗೆಯೊಂದಿಗೆ ಮುಗಿಸಿ. ಇದಾದ ಮೇಲೆ ದಾರವನ್ನು ಕತ್ತರಿಸಿ.




ನಾವೀಗ ಸೀಮ್ ಅಲೋಯನನ್ನು ತೆರೆಯಬೇಕು. ಫ್ಲಟ್ ಮಾಡಿ ನಂತರ ಅದರ ಮೇಲೆ ಐರನ್ ಮಾಡಿ. ಫ್ಲಾಟ್ ಮಾಡುತ್ತಾ ಐರನ್ ಮಾಡಿ. ಬಿಸಿಯಾದ ಐರನಿನಿಂದ ಹುಷಾರಾಗಿರಿ. ಒಂದು ಕಡೆ ಸೀಮ್ ಅಲೋಯನ್ಸ್ ಆದ ಮೇಲೆ ಇದನ್ನೇ ಇನ್ನೊಂದು ಕಡೆ ಮಾಡಿ.






ಐರನ್ ಮಾಡಿದ ಮೇಲೆ ಸ್ಟ್ರಿಪನ್ನು ಒಳಗಿನಿಂದ ಹೊರಕ್ಕೆ ತಿರುಗಿಸಿ. ನಾವು ಇದಕ್ಕೆ ಲೂಪ್ ಟರ್ನರನ್ನು ಬಳಸುತ್ತೇವೆ. ಲೂಪ್ ಟರ್ನರನ್ನು ಹಾಕಿ ಅದನ್ನು ಹೊರಕ್ಕೆ ಇನ್ನೊಂದು ಕಡೆಯಿಂದ ಎಳಯಿರಿ. ಈಗ ಲೂಪ್ ಟರ್ನರಿನ ಹುಕನ್ನು ಬಟ್ಟೆಗೆ ಸೇರಿಸಿ ಮತ್ತು ನಿಧಾನವಾಗಿ ಲೂಪ್ ಟರ್ನರನ್ನು ಹೊರಕ್ಕೆ ಎಳೆಯಿರಿ. ಬಟ್ಟೆ ಜೊತೆಗೆ ಬರುತ್ತದೆ. ಮತ್ತು ಸ್ಟ್ರಿಪ್ ಒಳಗಿನಿಂದ ಹೊರಕ್ಕೆ ತಿರುಗಿರುತ್ತದೆ. ಈಗ ಮತ್ತೆ ಐರನಿಂಗ್ ಬೋರ್ಡಿಗೆ ಹೋಗೋಣ. ಸೀಮ್ ಲೈನನ್ನು ಅದರ ಮೇಲೆ ಐರನ್ ಮಾಡಿ ಫ್ಲಾಟ್ ಮಾಡಿ. ನಿಮ್ಮ ಐರನ್ ಮಾಡಿರುವ ಹೂಪ್ ಸ್ಟ್ರಿಪ್ ನೋದಲು ಹೀಗೆ ಕಾಣಬೇಕು. ಈಗ ಮತ್ತೆ ಹೊಲೆಯುವ ಕಡೆಗೆ.







ಸ್ಟ್ರಿಪಿನ ಎಡ್ಜಿಗೆ ಎಡ್ಜ್ ಸ್ಟಿಚ್ ಬೇಕು. ಒಂದು ಎಡ್ಜನ್ನು ಪ್ರೆಸ್ಸರ್ ಫುಟಿನ ಕೆಳಗೆ ಅಲೈನ್ ಮಾಡಿ ಹೊಲೆಯಿರಿ. ಸ್ಟ್ರಿಪಿನ ಒಂದು ತುದಿಯಿಂದ ಇನ್ನೊಂದು ತುದಿಗೆ ಹೊಲೆಯಿರಿ, ಈಗ, ಇದನ್ನೇ ಸ್ಟ್ರಿಪಿನ ಇನ್ನೊಮ್ಮು ಎಡ್ಜಿಗೂ ಮಾಡಿ. ಹೆಚ್ಚಾದ ದಾರವನ್ನು ಕತ್ತರಿಸಿ. ಹೊಲೆದಿರುವ ಸ್ಟ್ರಿಪ್ ಹೀಗೆ ಕಾಣಬೇಕು. ಈಗ ವೇಸ್ಟ್ ಲೈನಿಗೆ ಲೂಪನ್ನು ಕಟ್ ಮಾಡೋಣ. ಸ್ಟ್ರಿಪನ್ನು ಅರ್ಧಕ್ಕೆ ಮಡಚಿ ಫೋಲ್ಡ್ ಮೇಲೆ ಕಟ್ ಮಾಡಿ. ಒಂದು ಅರ್ಧವನ್ನು ತೆಗೆದುಕೊಂಡು ಪೋಲ್ಡ್ ಮೇಲೆ ಕಟ್ ಮಾಡಿ. ಇನ್ನೊಮ್ಮೆ ಒಂದು ಸಣ್ಣ ಸ್ಟ್ರಿಪನ್ನು ಅರ್ಧವನ್ನು ತೆಗೆದುಕೊಂಡು ಅರ್ಧಕ್ಕೆ ಕಟ್ ಮಾಡಿ. ಒಟ್ಟು ನಮಗೆ ೮ ಲೂಪ್ ಟ್ರೌಶರಿಗಾಗಿ ಸಿಗುತ್ತದೆ.


















ಈಗ ಮೆತ್ತೆ ನಮ್ಮ ಕಾನ್ವಾಸ್ ಸ್ಟ್ರಾಇಪಿನ ಕಡೆ ಹೋಗೋಣ. ನಾವು ಈಗ ಅದಕ್ಕೆ ಲೂಪನ್ನು ಪಿನ್ ಮಾಡುತ್ತೇವೆ. ಸಣ್ಣ ಸ್ಟ್ರಿಪನ್ನು ತೆಗೆದುಕೊಂಡು ಅದನ್ನು ಸುತ್ತಲೂ ತಿರುಗಿಸಿ. ಎಡ್ಜಿನಿಂದ ೩.೫ ಇಂಚು ಅಳತೆ ಮಾಡಿ. ಸ್ಟ್ರಿಪಿನ ಮೇಲೆ ೪ ಮಾರ್ಕ್ ಮಾಡಿ, ಎರಡು ಮಾರ್ಕ್ ನಡುವೆ ೩.೫ ಇಂಚು ಜಾಗವಿರಬೇಕು. ಮಿಕ್ಕಿರುವ ಸ್ಟ್ರಿಪನ್ನು ಹಾಗೆ ಬಿಡಿ. ಲೂಪನ್ನು ಮಾರ್ಕ್ ಮೇಲೆ ಇಡಿ, ಲೂಪಿನ ಬಾಟಮ್ ಸ್ಟ್ರಾಇಪಿನ ಬಾಟಮ್ ಲೈನನ್ನು ಮ್ಯಾಚ್ ಆಗಬೇಕು. ಲೂಪನ್ನು ಜಾಗದಲ್ಲಿ ಪಿನ್ ಮಾಡಿ. ಇದನ್ನು ಎಲ್ಲಾ ಮಾರ್ಕಿಂಗಿಗೂ ಮಾಡಿ. ಈಗ ಉದ್ದದ ಕಾನ್ವಾಸ್ ಸ್ಟ್ರಿಪ್, ಇದೇ ವಿಧಾನವನ್ನು ಅನುಸರಿಸಿ. ಲೂಪನ್ನು ಪ್ರಾರಂಭದಿಂದ ೩.೫ ಇಂಚು ಪಿನ್ ಮಾಡಿ.

ಅಂತಿ ಸ್ಲಿಪ್ ಬ್ಯಾಂಡನ್ನು ತೆಗೆದುಕೊಂಡು ಅದನ್ನು ಕನ್ವಾಸ್ ಸ್ಟ್ರಿಪಿನ ಮೇಲಿಡಿ, ಬಲಭಾಗ ಬಲಭಾಗವನ್ನು ನೋಡುವಂತಿರಭೇಕು. ಲೂಪನ್ನು ಮತ್ತು ಬ್ಯಾಂಡಿನ ಕೊನೆಯನ್ನು ಪಿನ್  ಮಾಡಿ. ಈಗ ಬ್ಯಾಂಡಿನ ಸೈಜ್ ೧/೨ ಇಂಚು ವೇಸ್ಟ್ ಲೈನಿನಿಂದ ಅರ್ಧ ಇರಬೇಕು. ಈ ಪಾಯಿಂಟನ್ನು ೨೦ ಇಂಚ್ ಮಾರ್ಕ್ ಮಾಡಿ. ಅಂತಿ ಸ್ಲಿಪ್ ಬ್ಯಂದನ್ನು ಈ ಮಾರ್ಕ್ ಮೇಲೆ ಕಟ್ ಮಾಡಿ. ಈಗ ಎರಡನೆ ಕಾನ್ವಾಸ್ ಸ್ಟಿಪಿನ ಕದೆಗೆ, ಬಲಭಾಗ ಬಲಭಾಗವನ್ನು ನೋಡುವಂತೆ ಎಲ್ಲಾ ಲೂಪ್ ಪೊಸಿಶನಿಗೂ ಪಿನ್ ಮಾಡಿ. ಈ ಸ್ಟ್ರಿಪಿನ ಬ್ಯಾಂಡ್ ಸ್ಟ್ರಿಪಿನ ಉದವನ್ನು ಹೋಲುತ್ತದೆ. ಬ್ಯಾಂಡನ್ನು ಕತ್ತರಿಸಿ. ಬ್ಯಾಂಡನ್ನು ಸ್ಟ್ರಿಪಿಗೆ ಹೊಲೆಯಿರಿ.

ಉದ್ದ ಸ್ಟ್ರಿಪನ್ನು ಪ್ರೆಸ್ಸರ್ ಫುಟಿನ ಎಡ್ಜಿಗೆ ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ. ಶುರುವಿನಲ್ಲಿ ರಿವರ್ಸ್ ಹೊಲಿಗೆ ಹಾಕಿ. ಹೊಲೆಯುತ್ತಿರುವಾಗ ಪಿನ್ ಗಳನ್ನು ತೆಗೆಯಿರಿ. ಲೂಪ್ ಗಳು ಜಾಗದಲ್ಲೇ ಇರಭೇಕು. ಒಮ್ಮೆ ವೇಸ್ಟ್ ಬ್ಯಾಂಡಿನ ತುದಿಯನ್ನು ತಲುಪಿದ ಮೇಲೆ ನಿಲ್ಲಿಸಿ ರಿವರ್ಸ್ ಹೊಲಿಗೆ ಹಾಕಿ. ನಿಮ್ಮ ಹೊಲಿಗೆಗಳೂ ಹೀಗೆ ಕಾಣಬೇಕು. ಈಗ ಬ್ಯಾಂಡನ್ನು ತಿರುಗಿಸಿ ತೆರೆದು  ತೋರಿಸಿರುವ ಹಾಗೆ ಎಡ್ಜ್ ಸ್ಟಿಚನ್ನು ಹಾಕಿ. ಬ್ಯಾಂಡಿನ ಕೊನೆವರೆಗೂ ಹೊಲೆದು ದಾರವನ್ನು ಕತ್ತರಿಸಿ. ಈಗ ಮೇನ್ ಬಟ್ಟೆಗೆ ಲೂಪನ್ನು ಹೊಲೆಯೋಣ. ಸ್ಟ್ರಿಪನ್ನು ಪ್ರೆಸ್ಸರ್ ಫುಟಿನ ಕೆಳಗೆ ಇಟ್ಟು ೨–೩ ಇಂಚು ಮೊದಲ ಲೂಪಿನಿಂದ ಇಡಬೇಕು. ಹತ್ತಿರ ಬಂದಾಗ ಲೂಪನ್ನು ಅನ್ ಪಿನ್ ಮಾಡಿ ಅದನ್ನು ಬೆಲ್ಟ ಸುಲಭವಾಗಿ ಹೋಗಲು ಸ್ವಲ್ಪ ಲೂಸ್ ಮಾಡಿ. ಲೂಪ್ ನೇರವಾಗಿದೆಯೇ ನೋಡಿಕೊಂಡು ಅದರ ಮೇಲೆ ಹೊಲೆಯಿರಿ. ಇದೇ ವಿಧಾನವನ್ನು ಸ್ಟ್ರಿಪಿನ ಎಲ್ಲಾ ಲೂಪಿಗೂ ಮಾಡಿ. ಕೊನೆಯನ್ನು ತಲಪಿದಾಗ ದಾರವನ್ನು ಕತ್ತರಿಸಿ. ಲೂಪ್ಸ್ ನೋಡಲು ಹೀಗೆ ಕಾಣಬೇಕು. ಲೂಪಿನ ಹೆಚ್ಚಾದ ಭಾಗವನ್ನು ಕತ್ತರಿಸಿ. ಹೊಲಿಗೆಯನ್ನು ಅಥವ ಟ್ರೌಶರನ್ನು ಕಟ್ ಮಾಡಬೇಡಿ.




ಸ್ಟ್ರಿಪನ್ನು ಮೇಲಿನಿಂದ ಕೆಳಕ್ಕೆ ತಿರುಗಿಸಿ, ನೀವು ನೋಡಬಹುದು ಪ್ರಾರಂಭದಲ್ಲಿ ಬಟ್ಟೆಯೆ ಹೆಚ್ಚಾದ ಪೀಸ್ ಇದೆ. ನಾವು ಪೀಸನ್ನು ಬಲಭಾಗ ಬಲಭಾಗವನ್ನು ನೋಡುವಂತೆ ಮಡಚಬೇಕು.


















ಪೀಸಿನ ಎಡ್ಜನ್ನು ಹೊಲೆಯೋಣ. ಸ್ಟ್ರಿಪಿನ್ ಓಪೆನ್ ಎಂಡನ್ನು ಒಳಕ್ಕೆ ೧/೨ ಇಂಚು ತೋರಿಸಿರುವಂತೆ ಮಡಚಿ. ಎಡ್ಜಿನಿಂದ ಹೊಲೆಯಲು ಫ್ರಾರಂಭಿಸಿ. ಫ್ರಾರಂಭದಲ್ಲಿ ಮತ್ತು ಕೊನೆಯಲ್ಲಿ ರಿವರ್ಸ್ ಹೊಲಿಗೆ ಹಾಕಿ. ಇದಾದ ಮೇಲೆ ದಾರವನ್ನು ಕತ್ತರಿಸಿ ಮತ್ತು ಇದನ್ನೇ ಇನ್ನೊಂದು ತುದಿಗೂ ಮಾಡಿ. ನಿಮ್ಮ ಹೊಲಿಗೆ ಹೀಗೆ ಕಾಣಬೇಕು.

ಈ ಸ್ಟ್ರಿಪಿನ ಮೇಲೆ ಇನ್ನೊಂದು ಹೊಲಿಗೆ ಬಾಕಿ ಇದೆ. ನಾವು ಬೆಲ್ಟಿನ ಸೈಜನ್ನು ಫ್ಯಸಿಂಗಿನ ಅಗಲಕ್ಕೆ ಅಳತೆ ಮಾಡಬೇಕು. ನಾವು ಸ್ಟ್ರಿಪನ್ನು ತಿರುಗಿಸಬೇಕು ಮತ್ತು ಫ್ಯಸಿಂಗ್ ಎಡ್ಜಿನ ಮೇಲೆ ಹೊಲೆಯಬೇಕು. ಎಡ್ಜನ್ನು ಪ್ರೆಸ್ಸರ್ ಫುಟಗೆ ಅಲೈನ್ ಮಾಡಿ ಹೊಲೆಯಲು ಫ್ರಾರಂಭಿಸಿ. ದಾರವನ್ನು ಕತ್ತರಿಸಿ ಇದನ್ನು ಇನ್ನೊಂದು ಕಡೆಗೂ ಮಾಡಿ. ಸೆಕ್ಷನ್ ಹೀಗೆ ಕಾಣಭೇಕು. ನಾವು ಈಗ ಇದನ್ನು ಸ್ವಲ್ಪ ಒಳಗಿನಿಂದ ಹೊರಕ್ಕೆ ತಿರುಗಿಸಬೇಕು. ಇದು ಟ್ರೌಶರಿನ ಸೂಕ್ಷ್ಮವಾದ ಭಾಗ ಸಹನೆಯಿಂದ ತಿರುಗಿಸಿ. ಇದು ಹೀಗೆ ಕಾಣುತ್ತದೆ, ಮುಗಿದ ಮೇಲೆ.

ಈಗ ಎರಡನೆ ಸ್ಟ್ರಿಪ್. ಎಲ್ಲಾ ಹಂತವನ್ನು ಪುನರಾವರ್ತಿಸಿ. ಬ್ಯಾಂಡನ್ನು ಹೊಲೆಯುವುದು, ಟಾಪ್ ಸ್ಟಿಚನ್ನು ಮಾಡುವುದು ಹಾಗೂ ಕೊನೆಯದಾಗಿ ಲೋಪನ್ನು ಹೊಲೆದು ಹೆಚ್ಚಾದ ಬಟ್ಟೆಯನ್ನು ಕತ್ತರಿಸುವುದು. ಇದಾದ ಮೇಲೆ ನಾವು ಸ್ಟ್ರಿಪನ್ನು ಅರ್ಧಕ್ಕೆ ತೋರಿಸಿರುವಂತೆ ಮಡಚಿ ಮತ್ತೆ ಅಡ್ಡವಾಗಿ ಕಾನ್ವಾಸ್ ಎಡ್ಜಿನ ಮೇಲೆ ತೋರಿಸಿರುವಂತೆ ಹೊಲೆಯಬೇಕು. ಇದಾದ ಮೇಲೆ ಒಳಗಿನಿಂದ ಹೊರಕ್ಕೆ ತಿರುಗಿಸಿ. ನಿಮ್ಮ ಸ್ಟ್ರಿಪ್ ಗಳು ಹೀಗೆ ಕಾಣಬೇಕು.

## ಹಂತ ೧೨ : ಟ್ರೌಶರಿಗೆ ವೇಸ್ಟ್ ಬ್ಯಾಂಡನ್ನು ಸೇರಿಸಿ ಬಾಟಮನ್ನು ಹೆಮ್ಮ್ ಮಾಡಬೇಕು.

ವೇಸ್ಟ್ ಬ್ಯಾಂಡಳು ನೋಡಲು ಹೀಗೆ ಕಾಣಬೇಕು. ಈಗ ಅದನ್ನು ಟ್ರೌಶರಿಗೆ ಸೇರಿಸೋಣ. ಜಿಪ್ಪರನ್ನು ಓಪೆನ್ ಮಾಡಿ. ಈಗ ಸ್ಟ್ರಿಪನ್ನು ಎಕ್ಟೆಂಷನಿನೊಂದಿಗೆ ತೆಗೆದುಕೊಂಡು ಅದನ್ನು ಟ್ರೌಶರಿನ ಎಡಗಾಲಿನ ಮೇಲಿಡಿ ಬಾಲಭಾಗ ಬಲಭಾಗವನ್ನು ನೋಡುವಂತೆ ವೀಡಿಯೋದಲ್ಲಿ ತೋರಿಸಿರುವಂತೆ ಇಡಬೇಕು. ಹೆಚ್ಚಾದ ಭಾಗವನ್ನು ಪ್ಯಾಂಟಿನ ಫ್ಲೈ ಹಿಂಭಾಗದಲ್ಲಿ ಬಿಡಬೇಕು. ಸ್ಟ್ರಿಪನ್ನು ವೇಸ್ಟ್ ಲೈನಿಗೆ ಪಿನ್ ಮಾಡಿ. ನೀವು ಸ್ಟ್ರಿಪ್ ಮತ್ತು ವೇಸ್ಟ್ ಲೈನನ್ನು ಮ್ಯಾಚ್ ಮಡಿದ್ದೀರ ನೋಡಿಕೊಳ್ಳಿ, ಇನ್ನೊಂದು ಸ್ಟ್ರಿಪನ್ನು ತೆಗೆದುಕೊಳ್ಳಿ ಅದನು ಎದುರಿನ ಕಾಲಿನ ಫ್ಲೈ ಗೆ ಅಲೈನ್ ಮಾಡಿ ಮತ್ತು ಬಲಭಾಗ ಬಲಭಾಗವನ್ನು ನೋಡುವಂತೆ ಪಿನ್ ಮಾಡಿ. ವೇಸ್ಟ್ ಬ್ಯಾಂಡನ್ನು ವೇಸ್ಟ್ ಲೈನಿಗೆ ಅಡ್ಡವಾಗಿ ಪಿನ್ ಮಾಡಿ. ನಾವು ಪಿನ್ ಮಾಡಿರುವ ಲೈನ್ ಮೇಲೆ ಹೊಲೆಯುತ್ತೇವೆ ಮತ್ತು ಅದರೊಂದಿಗೆ ಟ್ರೌಶರಿನ ಬಾಟಮ್ ಹೆಮ್ಮನ್ನು ಮಾಡಬೇಕು.

ಈಗ ಹೊಲೆಯೋಣ

ಟ್ರೌಶರನ್ನು ಸೀವಿಂಗ್ ಮಷೀನಿಗೆ ತೆಗೆದುಕೊಂಡು ಹೋಗಿ. ನಾವು ಬ್ಯಾಂಡನ್ನು ಹೆಚ್ಚಾದ ಭಾಗದಿಂದ ಹೊಲೆಯೋಣ. ನಾವು ಕಾನ್ವಾಸ್ ಫೇಸಿಂಗ್ ಮೇಲೆ ತೋರಿಸಿರುವಂತೆ ಅಂಟಿ ಸ್ಲಿಪ್ ಬ್ಯಾಂಡಿನ ಕೆಳಗೆ ಎಡ್ಜಿನಲ್ಲಿ ಹೊಲೆಯಬೇಕು. ನಿಧಾನವಾಗಿ ಫ್ರಾರಂಭಿಸಿ ಪೂರ್ತಿ ಬ್ಯಾಂಡನ್ನು ಒಳಕ್ಕೆ ಹೊಲೆಯಿರಿ. ಹೊಲೆಯುತ್ತಿರುವಾಗ ಪಿನ್ ಗಳನ್ನು ತೆಗೆಯುತ್ತಾ ಹೋಗಿ. ಎಡ್ಜನ್ನು ಕೆಲವು ರಿವರ್ಸ್ ಹೊಲಿಗೆಯೊಂದಿಗೆ ಮುಗಿಸಿ. ವೇಸ್ಟ್ ಬಲಭಾಗದಿಂದ ನೋಡಲಿ ಹೀಗೆ ಕಾಣಬೇಕು. ಈಗ ಪ್ಯಾಂಟಿನ ಹಿಂಭಾಗಕ್ಕೆ ಹೋಗೋಣ. ನೀವು ನೋಡಬಹುದು ನಾವು ಟ್ರೌಶರಿನ ಬಟ್ಟೆಯ ಹಿಂಭಾಗದಲ್ಲಿ ಓಪೆನಿಂಗನ್ನು ಬಿಟ್ಟಿದ್ದೇವೆ.



















ಸ್ಪೈಡನ್ನು ಬಾಲಭಾಗ ಬಲಭಾಗವನ್ನು ನೋಡುವಂತೆ ಅಲೈನ್ ಮಾಡಿ ಮತ್ತು ಬಟ್ಟೆಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಅಲೈನ್ ಮಾಡಿ. ಎಲ್ಲಿಗೆ ನಿಲ್ಲಿಸಿದ್ದೀರೋ ಅಲ್ಲಿಂದ ಪ್ರಾರಂಭಿಸಿ ವೇಸ್ಟ್ ಬ್ಯಾಂಡಿಗೆ ಅಡ್ಡವಾಗಿ ಆದರೆ ಕಾನ್ ವಾಸ್ ಭಾಗದ ಮೇಲೆ ಹಾಕಬೇಕು. ನಂತರ ಅಂಟಿ ಸ್ಲಿಪ್ ಬ್ಯಾಂಡಿನ ಮೇಲೆ ತೋರಿಸಿರುವಂತೆ ಹೊಲೆಯಬೇಕು. ರಿವರ್ಸ್ ಹೊಲಿಗೆಯನ್ನು ಹಾಕಿ ಮುಗಿಸಿ. ಹೆಚ್ಚಾದ ಬ್ಯಾಂಡನ್ನು ಮತ್ತುಸ್ಟ್ರಿಪನ್ನು ತೋರಿಸಿರುವಂತೆ ಕಟ್ ಮಾಡಿ.

ಈಗ ಸೀಮ್ ಅಲೋಯನನ್ನು ನಿಮ್ಮ ಬೆರಳಿನಿಂದ ಫ್ಲಾಟ್ ಮಾಡಿ ಮತ್ತು ವೇಸ್ಟ್ ಬ್ಯಾಂಡನ್ನು ಅದರ ಮೇಲೆ ಮಡಚಿ. ನಾವೀಗ ಡಿಚ್ ಸ್ಟಿಚನ್ನು ಹೊರಗಿನಿಂದ ವೇಸ್ಟಿಗೆ ಅಡ್ಡವಾಗಿ ಹಾಕಬೇಕು. ಫ್ಲೈ ಭಾಗವನ್ನು ಪ್ರೆಸ್ಸರ್ ಫುಟಿನ ಕೆಳಗೆ ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ. ಬ್ಯಾಂಡನ್ನು ಒಳಭಾಗಕ್ಕೆ ಮಡಚುತ್ತಾ ಹೋಗಿ. ಈ ಫೋಲ್ಡ್ ವೇಸ್ಟ್ ಲೈನ್ ನೀಟಾಗಿ ಅತ್ಯಂತ ಮುಖ್ಯ ವೇಸ್ಟ್ ಬ್ಯಾಂಡಿನ ಎಲ್ಲಾ ಕಡೆಗೂ ಅಡ್ಡವಾಗಿ ಹೊಲೆಯಿರಿ. ಇದು ಮುಗಿಯಿತು!

ನಿಮ್ಮ ವೇಸ್ಟ್ ಲೈನ್ ನೋಡಲು ಮುಂಭಾಗದಿಂದ ಮತ್ತು ಹಿಂಭಾಗದಿಂದ ನೋಡಲು ಹೀಗೆ ಕಾಣಬೇಕು.

ಈಗ ಫಿನಿಷ್ಂಗ್ ಟಚನ್ನು ಸೇರಿದೋಣ. ನಾವು ಹುಕ್ ಮತ್ತು ಐ ಯನ್ನು ಫ್ಲಾಪಿಗೆ ಹೊಲೆಯಬೇಕು, ಇದಕ್ಕೆ ಮುಂಚೆ ಎಡ್ಜನ್ನು ಕೈಯಿಂದ ಹೆಮ್ಮ್ ಮಾಡಿ. ಒಮ್ಮೆ ಪೂರ್ತಿ ಎಡ್ಜನ್ನು ಹೆಮ್ಮಿಂಗ್ ಮಾಡಿದ ಮೇಲೆ ದಾರವನ್ನು ಕತ್ತರಿಸಿ.

ಹುಕನ್ನು ತೋರಿಸಿರುವಂತೆ ಬೆಲ್ಟ್ ಎಕ್ಸ್ಟೆಂಷನಿನ ಮೇಲೆ ಇಟ್ಟು ಕೈಯಲ್ಲಿ ಹೊಲೆಯಿರಿ. ನೀವು ಟ್ರೌಶರಿನ ಬಲಭಾಗದ ಮೇಲೆ ಹೊಲೆಯುತ್ತಿಲ್ಲಾ ಎಂದು ನೋಡಿಕೊಳ್ಳಿ, ಇದಾದ ಮೇಲೆ ದಾರವನ್ನು ಕತ್ತರಿಸಿ

ಇದೇ ರೀತಿಯಲ್ಲಿ ಎರಡನೆ ಹುಕನ್ನು ಅಂಟಿ ಸ್ಲಿಪ್ ಲೈನಿಂಗ್ ಮತ್ತು ಫ್ಲಾಪಿನ ಮೇಲೆ ಎರಡನೆ ಹುಕನ್ನು ಹೊಲೆಯಬೇಕು. ಐ ಯನ್ನು ಹೊಲೆಯಲು, ಫ್ಲಾಪನ್ನು ಕ್ಲೋಸ್ ಮಾಡಿ. ಚಾಲ್ಕಿನಿಂದ ಹುಕಿನ ಜಾಗವನ್ನು ಎದುರುಗಡೆ ಮಾರ್ಕ್ ಮಾಡಿ. ಇದು ನಮ್ಮ ಐ ಜಾಗವಾಗಿರುತ್ತದೆ. ಇದನ್ನೇ ಇನ್ನೊಂದು ಐ ಗೂ ಮಾಡಬೇಕು. ಮಾರ್ಕ್ ಮಾಡಿರುವ ಲೈನ್ ಮೇಲೆ ಐ ಯನ್ನು ಕೈಯಲ್ಲಿ ಹೊಲೆಯಿರಿ. ನೋಡಿ ಎಷ್ಟು ಅಚ್ಚುಕಟ್ಟಾಗಿ ಹುಕ್ ಮತ್ತೆ ಐ ಸೆಟ್ ಕಾಣುತ್ತದೆ.

ಈಗ ಟ್ರೌಶರಿನ ಅಂತಿಮ ಭಾಗ. ಬಾಟಮ್ ಹೆಮ್ಮ್. ಟ್ರೌಶರನ್ನು ಒಳಗಿನಿಂದ ಹೊರಕ್ಕೆ ತಿರುಗಿಸಿ ಮತ್ತು ನಾವು ಟ್ರೌಶರಿನ ತಪ್ಪಾದ ಭಾಗದ ಕೆಲಸ ಮಾಡಬೇಕು. ಭಾಟಮನ್ನು ೧/೨ ಇಂಚು ಮಡಚಿ ಮತ್ತೆ ೧ ಇಂಚು ಮಡಚಿ. ಬಾಟಮನ್ನು ಕೈಯಲ್ಲಿ ಹೆಮ್ಮ್ ಮಾಡಿ. ಇದೇ ವಿಧಾನವನ್ನು ಇನ್ನೊಂದು ಬಾಟಮಿಗೂ ಹೆಮ್ ಮಾಡಿ. ಇದು ಮುಗಿಯಿತು! ಟ್ರೌಶರನ್ನು ಒಳಗಿನಿಂದ ಹೊರಕ್ಕೆ ತಿರುಗಿಸಿ.

ನಮ್ಮ ಟ್ರೌಶರ್ ಈಗ ತಯಾರಾಗಿದೆ. ಇದು ನೋಡಲು ಸ್ಮಾರ್ಟ್ ಮತ್ತು ಕ್ರಿಸ್ಪಿಯಾಗಿದೆ ಅಲ್ಲವೇ? ಇದನ್ನು ನಿಮ್ಮ ವಾರ್ಡ್ರೋಬಿಗೆ ಸೇರಿಸಿ ಮತ್ತು ನಿಮ್ಮ ಸ್ಟೈಲನ್ನು ಎಲಿವೇಟ್ ಮಾಡಿ.